ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಫೆಬ್ರವರಿ ೩ನೇ ವಾರ**

16-02-2026 TO 21-02-2026

## ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆ

- ಪ್ಯಾಕ್ಸ್ ಸಿಲಿಕಾ ಒಕ್ಕೂಟಕ್ಕೆ ಭಾರತ ಸೇರ್ಪಡೆ
- 'ಗ್ರೇಟ್ ನಿಕೋಬಾರ್'ಗೆ ಎನ್‌ಜಿಟಿ ಅನುಮತಿ
- ಭಾರತ-ಅಮೆರಿಕ ಮಧ್ಯೆ ಕೇಬಲ್
- ಜಿಡಿಪಿ ಹೆಚ್ಚಳಕ್ಕೆ ಎ.ಐ ಸಹಕಾರಿ

# ‘ಹಿಂಸಾಚಾರ’ಕ್ಕೆ 3 ವರ್ಷ ಜೈಲು

## ಸರ್ಕಾರಿ ಅಧಿಕಾರಿ, ಸಿಬ್ಬಂದಿಗೆ ಬೆದರಿಕೆ: ಕಡಿವಾಣಕ್ಕೆ ಸರ್ಕಾರದಿಂದ ಮಸೂದೆ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಮೇಲೆ ನಡೆಯುತ್ತಿರುವ ಹಿಂಸಾಚಾರ ಮತ್ತು ಆಸ್ತಿಗಳಿಗೆ ಹಾನಿ ಉಂಟು ಮಾಡುವ ಕೃತ್ಯಗಳನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಇಂತಹ ದುಷ್ಕೃತ್ಯ ಎಸಗುವವರಿಗೆ ಮೂರು ವರ್ಷ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ ವಿಧಿಸಲು ಅವಕಾಶ ಕಲ್ಪಿಸುವ ಕಾನೂನು ಜಾರಿಗೆ ತರಲು ಮುಂದಾಗಿದೆ.

ಇಂತಹ ಕೃತ್ಯಗಳು ಜಾಮೀನುರಹಿತ ಅಪರಾಧ ಆಗಲಿವೆ. ಹಾನಿ ಮಾಡಿರುವ ಸರ್ಕಾರಿ ಆಸ್ತಿಯ ಖರೀದಿ ದರದ ಎರಡು ಪಟ್ಟು ದಂಡ ಹಾಗೂ ಈ ಅಪರಾಧದ ತನಿಖೆ ನಡೆಸುವ ನ್ಯಾಯಾಲಯ ನಿರ್ಧರಿಸುವ ಆಸ್ತಿ ಹಾನಿಯ ನಷ್ಟದ ಮೊತ್ತವನ್ನು ಕೂಡಾ ಅಪರಾಧಿಯಿಂದ ವಸೂಲು ಮಾಡಲು ಈ ಕಾನೂನಿನಡಿ ಅವಕಾಶ ಕಲ್ಪಿಸಲು ಸರ್ಕಾರ ಉದ್ದೇಶಿಸಿದೆ.

ಈ ಉದ್ದೇಶದಿಂದ ‘ಕರ್ನಾಟಕ ಸರ್ಕಾರಿ ನೌಕರರ ವಿರುದ್ಧದ ಹಿಂಸಾಚಾರ ಮತ್ತು ಸರ್ಕಾರಿ ಕಚೇರಿಗಳಲ್ಲಿ ಆಸ್ತಿ ಹಾನಿ ನಿಷೇಧ ಕಾಯ್ದೆ-2026’ ರೂಪಿಸಲು ಕರಡು ಮಸೂದೆಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ ಸಿದ್ಧಪಡಿಸಿದೆ.

ಇತ್ತೀಚೆಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತಾ ಗೌಡ ಅವರನ್ನು ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವಾಚ್ಯ ಪದಗಳಿಂದ ನಿಂದಿಸಿರುವುದಲ್ಲದೇ, ಕಚೇರಿಗೆ ಬೆಂಕಿ ಹಾಕುವುದಾಗಿ ಬೆದರಿಕೆ ಒಡ್ಡಿದ್ದರು. ಈ ಘಟನೆ ನಡೆದ ಕೆಲವೇ ದಿನಗಳಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರು ಜಿಲ್ಲೆಯ ವರುಣ ವಿಧಾನಸಭಾ ಕ್ಷೇತ್ರದ ಗುಡಮಾದನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಿದ್ದನ್ನು ಪರಿಶೀಲಿಸಲು ಗ್ರಾಮ ಸಹಾಯಕ ನವೀನ್‌ಕುಮಾರ್ ಜತೆಗೆ ತೆರಳಿದ್ದ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಜಿ. ಭವ್ಯಾ ಅವರನ್ನು ಒತ್ತುವರಿದಾರ, ಜೆಡಿಎಸ್ ನಾಯಕರ ಒಡನಾಟ ಇರುವ ಪುಟ್ಟಸ್ವಾಮಿ, ‘ಮೊದಲು ನಿಮ್ಮ ಹೆಣ ಬೀಳುತ್ತದೆ’ ಎಂದು ಬೆದರಿಕೆ ಹಾಕಿದ್ದರು.

ಈ ಎರಡು ಘಟನೆಗಳಿಂದ ತೀವ್ರ ಮುಜುಗರ ಎದುರಿಸಿದ್ದ ಸರ್ಕಾರ, ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಪ್ರತ್ಯೇಕ ಕಾಯ್ದೆ ಜಾರಿಗೆ ಮುಂದಾಗಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

‘ಸರ್ಕಾರಿ ನೌಕರರ ಸುರಕ್ಷತೆ, ಘನತೆ ಕಾಪಾಡುವುದರ ಜೊತೆಗೆ, ಯಾವುದೇ ಅಡೆತಡೆ ಇಲ್ಲದೆ ಅವರು ಕರ್ತವ್ಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಅಧಿಕಾರಿ, ಸಿಬ್ಬಂದಿ ವರ್ಗದ ಮೇಲೆ ಹಿಂಸಾಚಾರ, ಕರ್ತವ್ಯಕ್ಕೆ ಅಡ್ಡಿ, ಬೆದರಿಕೆ, ನಿಂದನೆ ಮತ್ತು ಸರ್ಕಾರಿ ಆಸ್ತಿಗೆ ಹಾನಿ ಉಂಟು ಮಾಡುವಂತಹ ಘಟನೆಗಳು ಪದೇ ಪದೇ ನಡೆಯುತ್ತಿವೆ. ಇದರಿಂದ ಸಾರ್ವಜನಿಕ ಆಡಳಿತ ಮತ್ತು ಅಗತ್ಯ ಸೇವೆಗಳ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಈ ವಿಷಯವನ್ನು ಪರಿಗಣಿಸಿ, ತಡೆಯಲು ಕಾನೂನು ರಚನೆಯೇ ಸೂಕ್ತವೆಂಬ ಅಭಿಪ್ರಾಯ ವ್ಯಕ್ತವಾಯಿತು’ ಎಂದೂ ಮೂಲಗಳು ಹೇಳಿವೆ.

ಉದ್ದೇಶಿತ ಮಸೂದೆಯು ಶಾಲಾ ಕಾಲೇಜುಗಳು, ನಿಗಮ- ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು, ಅನುದಾನಿತ ಸಂಸ್ಥೆಗಳು, ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳು ಸೇರಿದಂತೆ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುವ ಗ್ರೂಪ್ ಎ, ಬಿ, ಸಿ ಮತ್ತು ಡಿ ವರ್ಗದ ಅಧಿಕಾರಿ, ಸಿಬ್ಬಂದಿ, ಹೊರಗುತ್ತಿಗೆ ಅಥವಾ ದಿನಗೂಲಿ ಆಧಾರದಲ್ಲಿ ಕೆಲಸ ಮಾಡುವ ನೌಕರರಿಗೆ ಅನ್ವಯವಾಗಲಿದೆ. ಈ ನೌಕರರ ಮೇಲೆ ಹಿಂಸಾಚಾರ ಎಸಗುವವರನ್ನು ಅಥವಾ ಎಸಗಲು ಪ್ರಯತ್ನಿಸುವವರನ್ನು, ಪ್ರಚೋದಿಸುವವರನ್ನು ಆರೋಪಿಗಳೆಂದು ಪರಿಗಣಿಸಲಾಗುವುದು. ಅಲ್ಲದೆ, ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ಬಳಿಕ ಅದರಲ್ಲಿರುವ ನಿಬಂಧನೆಗಳು, ಈಗಾಗಲೇ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ನಿಬಂಧನೆಗಳಿಗೆ ಹೆಚ್ಚುವರಿಯಾಗಿ ಇರಲಿದೆ ಎಂದೂ ಕರಡು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.



### ಮುಖ್ಯಾಂಶಗಳು

- ‘ಕರ್ನಾಟಕ ಸರ್ಕಾರಿ ನೌಕರರ ವಿರುದ್ಧದ ಹಿಂಸಾಚಾರ ಮತ್ತು ಸರ್ಕಾರಿ ಕಚೇರಿಗಳಲ್ಲಿ ಆಸ್ತಿ ಹಾನಿ ನಿಷೇಧ ಕಾಯ್ದೆ-2026’
- ಕರಡು ಸಿದ್ಧಪಡಿಸಿದ ಸರ್ಕಾರ

### ಯಾವುದೆಲ್ಲ ‘ಹಿಂಸಾಚಾರ’?

ಉದ್ದೇಶಿತ ಮಸೂದೆಯಲ್ಲಿ ಸರ್ಕಾರಿ ಅಧಿಕಾರಿ, ನೌಕರನಿಗೆ ಗಾಯ, ಹಾನಿ, ಜೀವಕ್ಕೆ ಅಪಾಯ ಅಥವಾ ಅಧಿಕೃತ ಕರ್ತವ್ಯಗಳ ನಿರ್ವಹಣೆಗೆ ಅಡ್ಡಿ ಉಂಟು ಮಾಡುವ ಅಥವಾ ಉಂಟು ಮಾಡುವ ಸಾಧ್ಯತೆ ಇರುವ ಯಾವುದೇ ಚಟುವಟಿಕೆಯನ್ನು ‘ಹಿಂಸಾಚಾರ’ ಎಂದು ಪರಿಗಣಿಸಲಾಗಿದೆ.

ದೈಹಿಕ ಹಲ್ಲೆ, ಬೆದರಿಸುವುದು, ಬಲವಂತಪಡಿಸುವುದು, ಆತಂಕ ಸೃಷ್ಟಿಸುವುದು ಅಥವಾ ಸರ್ಕಾರಿ ಕಚೇರಿಗಳಲ್ಲಿನ ಆಸ್ತಿಗಳಿಗೆ ಹಾನಿ ಉಂಟು ಮಾಡುವುದು, ಯಾವುದೇ ಎಲೆಕ್ಟ್ರಾನಿಕ್ ಮಾಧ್ಯಮದ (ಕರೆ ಮಾಡಿ) ಮೂಲಕವೂ ನಿಂದಿಸಿ, ಸರ್ಕಾರಿ ಕರ್ತವ್ಯ ನಿರ್ವಹಣೆಗೆ ಅಡ್ಡಿ ಮಾಡುವುದನ್ನು ಹಿಂಸಾಚಾರದ ವ್ಯಾಪ್ತಿಯ ಒಳಗೆ ತರಲಾಗಿದೆ. ಸರ್ಕಾರಿ ನೌಕರನ ವಿರುದ್ಧದ ಈ ರೀತಿಯ ಯಾವುದೇ ಹಿಂಸಾಚಾರ ಅಥವಾ ಆಸ್ತಿ ಹಾನಿಯನ್ನು ಈ ಮಸೂದೆಯು ನಿಷೇಧಿಸಲಿದೆ.


### ಅಪರಾಧಿಗೆ ಏನೆಲ್ಲ ಶಿಕ್ಷೆ?

- ಇಂತಹ ಅಪರಾಧ ಜಾಮೀನುರಹಿತವೆಂದು ಪರಿಗಣಿಸಲಾಗುವುದು
- ಕೃತ್ಯ ಎಸಗುವ ವ್ಯಕ್ತಿಗೆ 3 ವರ್ಷ ಜೈಲು ಶಿಕ್ಷೆ, ₹50 ಸಾವಿರದವರೆಗೆ ದಂಡ
- ಹಾನಿಯಾದ ಆಸ್ತಿಯ ಖರೀದಿ ಬೆಲೆಯ ಎರಡು ಪಟ್ಟು ದಂಡ
- ಅಪರಾಧದ ತನಿಖೆ ನಡೆಸುವ ನ್ಯಾಯಾಲಯವು ನಿರ್ಧರಿಸಿದಂತೆ ಆಸ್ತಿಗೆ ಉಂಟಾದ ನಷ್ಟ ವಸೂಲಿ
- ದಂಡದ ಮೊತ್ತ ಪಾವತಿಸಲು ವಿಫಲವಾದರೆ ಭೂ ಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ



Publication Date
16/02/2026

Presented by ಪ್ರಜಾವಾಣಿ



# ಭಾರತ– ಫ್ರಾನ್ಸ್ ಸಭೆ ನಾಳೆ



ನವದೆಹಲಿ: ಭಾರತ ಮತ್ತು ಫ್ರಾನ್ಸ್ ನಡುವೆ ರಕ್ಷಣಾ ವಿಷಯಗಳಿಗೆ ಸಂಬ( ಆರನೇ ದ್ವಿಪಕ್ಷೀಯ ಸಭೆ ಫೆಬ್ರುವರಿ 17ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಈ ವೇಳೆ ಉಭಯ ರಾಷ್ಟ್ರಗಳು ಹತ್ತು ವರ್ಷಗಳ ರಕ್ಷಣಾ ಸಹಕಾರ ಒಪ್ಪಂದವನ್ನು ನವೀಕರಿಸಲಿವೆ.

ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಫ್ರಾನ್ಸ್‌ನ ರಕ್ಷಣಾ ಸಚಿವೆ ಕ್ಯಾಥರಿನ್ ವೊಥಾ ಅವರು ಎರಡೂ ದೇಶಗಳ ನಡುವಿನ ರಕ್ಷಣಾ ಸಹಕಾರದ ಕುರಿತು ಮಾತುಕತೆ ನಡೆಸಲಿದ್ದಾರೆ. ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಹಭಾಗಿತ್ವದಲ್ಲಿ ಭಾರತದಲ್ಲಿ ಹಮರ್ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ ಇಬ್ಬರೂ ಸಹಿ ಹಾಕಲಿದ್ದಾರೆ.

# ಭಾರತ– ಫ್ರಾನ್ಸ್ ಸಭೆ ನಾಳೆ

ಒಂದನೇ ಪುಟದಿಂದ...

ಕೋಲಾರ ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಮತ್ತು ಏರ್‌ಬಸ್ ಜಂಟಿಯಾಗಿ ಆರಂಭಿಸಿರುವ ಎಚ್ 125 ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಇಬ್ಬರೂ ಪಾಲ್ಗೊಳ್ಳಲಿದ್ದಾರೆ. ಈ ಘಟಕವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರು ವರ್ಚುವಲ್ ಆಗಿ ಉದ್ಘಾಟಿಸುವರು.

ಇದು ಭಾರತದ ಮೊದಲ ಖಾಸಗಿ ಹೆಲಿಕಾಪ್ಟರ್ ತಯಾರಿಕಾ ಘಟಕವಾಗಿದ್ದು, 2027ರಲ್ಲಿ ಮೊದಲ ಹೆಲಿಕಾಪ್ಟರ್ ಅನ್ನು ಹೊರತರುವ ನಿರೀಕ್ಷೆಯಿದೆ.

ಉಭಯ ದೇಶಗಳ ನಡುವಿನ ಐದನೇ ದ್ವಿಪಕ್ಷೀಯ ಸಭೆ ನಡೆದ ಎರಡೂವರೆ ವರ್ಷಗಳ ನಂತರ ಈ ಸಭೆ ನಡೆಯುತ್ತಿದೆ. ಕೈಗಾರಿಕಾ ವಲಯದ ಸಹಕಾರವನ್ನು ವೃದ್ಧಿಸುವ ಬಗ್ಗೆಯೂ ಚರ್ಚೆ ನಡೆಯಲಿದೆ.

# ಮಾಜಿ ದೇವದಾಸಿಯರ ಸಂಖ್ಯೆ ಇಳಿದಿದೆ, ಆದರೆ...

## ಮರು ಸಮೀಕ್ಷೆಯಲ್ಲಿ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ನೋಟ, ಇನ್ನೂ ಸುಧಾರಿಸದ ಬದುಕು

• ರಾಜೇಶ್ ರೈ ಚಟ್ಲ

ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆ ಶೇ 50ರಷ್ಟು ಕಡಿಮೆಯಾಗಿದೆ. ಆದರೆ, ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯಲ್ಲಿ ಹೇಳಿಕೊಳ್ಳುವಂತಹ ಸುಧಾರಣೆಯಾಗಿಲ್ಲ ಎಂದು ಮಹಿಳಾ ಅಭಿವೃದ್ಧಿ ನಿಗಮವು ನಡೆಸಿರುವ ಮರು ಸಮೀಕ್ಷೆಯ ವರದಿ ಹೇಳಿದೆ. ಅನಕ್ಷರತೆ, ನಿರುದ್ಯೋಗ, ಜಮೀನು, ವಸತಿ ಇಲ್ಲದಿರುವುದು ಮುಂತಾದ ಸಮಸ್ಯೆಗಳನ್ನು ಅವರು ಈಗಲೂ ಎದುರಿಸುತ್ತಿದ್ದಾರೆ ಎಂಬುದನ್ನು ಅಂಕಿ ಅಂಶಗಳ ಸಹಿತ ವಿವರಿಸಿರುವ ವರದಿಯು ಮಾಜಿ ದೇವದಾಸಿಯರು ಮತ್ತು ಅವರ ಮಕ್ಕಳ ಜೀವನದ ಮಟ್ಟ ಸುಧಾರಿಸಲು ಸರ್ಕಾರಕ್ಕೆ ಹಲವು ಶಿಫಾರಸುಗಳನ್ನೂ ಮಾಡಿದೆ.

ರಾಜ್ಯದ 15 ಜಿಲ್ಲೆಗಳಲ್ಲಿ (ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಕಲಬುರಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ) 2025ರ ಸೆ.15ರಿಂದ ಡಿ.31ವರಗೆ ಮರು ಸಮೀಕ್ಷೆ ನಡೆಸಲಾಗಿತ್ತು. ಈ ಜಿಲ್ಲೆಗಳಲ್ಲಿ 23,395 ಮಾಜಿ ದೇವದಾಸಿಯರು ಹಾಗೂ ಈ ಕುಟುಂಬದವರ ಒಂದನೇ, ಎರಡನೇ ಮತ್ತು ಮೂರನೇ ತಲೆಮಾರಿನ 90,092 ಜನರು ಇರುವುದನ್ನು ಸಮೀಕ್ಷೆ ಗುರುತಿಸಿದೆ. 2007-2008ರಲ್ಲಿ 14 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು (ಬಳ್ಳಾರಿಯನ್ನು ವಿಭಜಿಸಿ ವಿಜಯನಗರ ಜಿಲ್ಲೆಯನ್ನು ರಚನೆ ಮಾಡಿರುವುದರಿಂದ ಈಗ ಜಿಲ್ಲೆಗಳ ಸಂಖ್ಯೆ 15 ಆಗಿದೆ). ಆಗಿನ ಸಮೀಕ್ಷೆಯು 46,660 ಮಾಜಿ ದೇವದಾಸಿಯರು ಇದ್ದಾರೆ ಎಂದು ಹೇಳಿತ್ತು. ಆಗಿನ ಅಂಕಿಗಳಿಗೆ ಹೋಲಿಸಿದರೆ, ಈಗ ಮಾಜಿ ದೇವದಾಸಿಯರ ಸಂಖ್ಯೆಯಲ್ಲಿ ಶೇ 50ರಷ್ಟು ಕಡಿಮೆಯಾಗಿದೆ.

ಈ ಎರಡು ಸಮೀಕ್ಷೆಗಳಿಗಿಂತಲೂ ಮೊದಲು 1993-94ನೇ ಸಾಲಿನಲ್ಲಿ ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಬಳ್ಳಾರಿ ಮತ್ತು ಕಲಬುರಗಿ... ಈ 10 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಆಗ 22,873 ಮಾಜಿ ದೇವದಾಸಿಯರನ್ನು ಗುರುತಿಸಲಾಗಿತ್ತು.

**ವರದಿಯಲ್ಲೇನಿದೆ?:** ಆ್ಯಪ್ ಮೂಲಕ ನಡೆಸಲಾದ ಮುರುಸಮೀಕ್ಷೆಯಲ್ಲಿ ಮಾಜಿ ದೇವದಾಸಿಯರ ಆರ್ಥಿಕ, ಸಾಮಾಜಿಕ ವಿವರಗಳನ್ನು ಕಲೆ ಹಾಕಲಾಗಿದೆ. ಎಲ್ಲವನ್ನೂ ಅಂಕಿ ಅಂಶಗಳ ಸಮೇತ ವರದಿಯಲ್ಲಿ ವಿವರಿಸಲಾಗಿದೆ.

**ಪರಿಶಿಷ್ಟರೇ ಹೆಚ್ಚು:** ಮರು ಸಮೀಕ್ಷೆಯಲ್ಲಿ ಗುರುತಿಸಿದ 23,395 ಮಾಜಿ ದೇವದಾಸಿಯರಲ್ಲಿ, ಅತೀ ಹೆಚ್ಚು (ಶೇ 98.3) ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದವರು. ಮಧ್ಯ ವಯಸ್ಸಿನವರು ಶೇ 48.3ರಷ್ಟಿದ್ದರೆ, 60 ವರ್ಷ ದಾಟಿದವರು ಶೇ 45ರಷ್ಟು ಇದ್ದಾರೆ. ಈ ಪೈಕಿ, ಶೇ 40.24 ರಷ್ಟು ದೇವದಾಸಿಯರು ತಮ್ಮ ಕುಟುಂಬದ ಮೇಲೆ ಅವಲಂಬಿತವಾಗಿದ್ದರೆ, ಶೇ 60ರಷ್ಟು ಸ್ವಾವಲಂಬಿಗಳಾಗಿ ಬದುಕುತ್ತಿದ್ದಾರೆ.



### ವಾರ್ಷಿಕ ಆದಾಯ

**22,907** ₹50 ಸಾವಿರಕ್ಕಿಂತ ಕಡಿಮೆ ಇರುವವರು

**448** ₹50 ಸಾವಿರದಿಂದ ₹1 ಲಕ್ಷದ ವರೆಗಿನವರು


**40** ₹1 ಲಕ್ಷ ಮತ್ತು ಹೆಚ್ಚು ಇರುವವರು

7,294 ಮಾಜಿ ದೇವದಾಸಿಯರು ನಿರುದ್ಯೋಗಿಗಳಾಗಿದ್ದಾರೆ. 1,547 ಮಂದಿ ಮಾತ್ರ ಉದ್ಯೋಗದಲ್ಲಿದ್ದಾರೆ. 1,847 ಮಂದಿ ಸ್ವಯಂ ಉದ್ಯೋಗಿಗಳು. 4,398 ಜನ ಇತರೆ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. 8,309 ಮಂದಿ ಗೃಹಿಣಿಯರು. ಶೇ 68.82ರಷ್ಟು ಮಹಿಳೆಯರಿಗೆ ಹೆಚ್ಚಿನ ವಯಸ್ಸಾಗಿದ್ದರೂ ಬದುಕಿಗಾಗಿ ಕೆಲಸವನ್ನೇ ಅವಲಂಬಿಸಿದ್ದಾರೆ.

**ಜಮೀನು, ಮನೆ ಇಲ್ಲ:** 19,955 (ಶೇ 85.29) ಮಂದಿ ಕೃಷಿ ಜಮೀನು ಹೊಂದಿಲ್ಲ. 1,039 (ಶೇ 4.40) ಮಂದಿಗೆ ಮಾತ್ರ ಸರ್ಕಾರದಿಂದ ಭೂಮಿ ಮಂಜೂರಾಗಿದೆ. 1,160 (ಶೇ 4.95) ಮಾಜಿ ದೇವದಾಸಿಯರಿಗೆ ವಂಶ ಪಾರಂಪರ್ಯವಾಗಿ ಜಮೀನು ಬಂದಿದೆ. ತಂದೆ/ಸಂಗಾತಿಯಿಂದ 994 (ಶೇ 4.20) ಮಂದಿ ಜಮೀನು ಹೊಂದಿದ್ದರೆ, ಸ್ವಂತ ದುಡಿಮೆಯಿಂದ 210 (ಶೇ 0.90) ಭೂಮಿ ಖರೀದಿಸಿದ್ದಾರೆ.

ಇವರ ಆದಾಯವೂ ತುಂಬಾ ಕಡಿಮೆ ಇದೆ. ಬಹುಪಾಲು ಮಹಿಳೆಯರ (22,907) ಆದಾಯ ₹50 ಸಾವಿರಕ್ಕೂ ಕಡಿಮೆ ಇದೆ ಎಂಬುದು ಸಮೀಕ್ಷೆಯಿಂದ ಗೊತ್ತಾಗಿದೆ.

**ಸರ್ಕಾರದಿಂದಲೂ ಸಿಕ್ಕಿಲ್ಲ ಮನೆ:** 15,420 ಮಂದಿಗೆ ಸರ್ಕಾರದಿಂದಲೂ ವಸತಿ ಸೌಲಭ್ಯ ಸಿಕ್ಕಿಲ್ಲ. ಮಾಜಿ ದೇವದಾಸಿ ವಸತಿ ಯೋಜನೆಯಡಿ 4,079 ಮಂದಿ ಮನೆ ಹೊಂದಿದ್ದಾರೆ. ಉಳಿದಂತೆ ವಿವಿಧ ಯೋಜನೆಗಳಡಿ, ಪ್ರಧಾನ ಮಂತ್ರಿ ಆವಾಸ್ (ಶಹರ) ಯೋಜನೆಯಡಿ 129, ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಅಡಿ 436, ಡಾ.ಬಿ. ಆರ್.ಅಂಬೇಡ್ಕರ್ ಯೋಜನೆ (ಗ್ರಾಮೀಣ) 642, ಡಾ.ಬಿ.ಆರ್.ಅಂಬೇಡ್ಕರ್ ಯೋಜನೆ (ಶಹರ) 358, ದೇವರಾಜ ಅರಸ್ ವಸತಿ ಯೋಜನೆ (ಶಹರ) 18, ದೇವರಾಜ ಅರಸ್ ವಸತಿ ಯೋಜನೆ (ಗ್ರಾಮೀಣ) 390, ಬಸವ ವಸತಿ ಯೋಜನೆ 179, ವಾಜಪೇಯಿ ವಸತಿ ಯೋಜನೆಯಡಿ 12, ಇತರೆ ವ್ಯವಸ್ಥೆಯಡಿ 1,732 ಮಂದಿ ವಸತಿ ಹೊಂದಿದ್ದಾರೆ.




* ಈಗಿನ ವಿಜಯನಗರ ಜಿಲ್ಲೆ ಬಳ್ಳಾರಿಯ ಭಾಗವಾಗಿತ್ತು

**22,873**

1993-94ರಲ್ಲಿ ನಡೆಸಿದ್ದ ಸಮೀಕ್ಷೆಯಲ್ಲಿ ಗುರುತಿಸಲಾಗಿದ್ದ ಮಾಜಿ ದೇವದಾಸಿಯರು

ಮಾಜಿ ದೇವದಾಸಿಯರಲ್ಲಿ **8,199** (ಶೇ 35) ಮಂದಿ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. **12,817** (ಶೇ 54.78) ಮಂದಿ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ. **1,126** (ಶೇ 4.81) ಮಂದಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಇದ್ದಾರೆ

## ಸಮೀಕ್ಷೆಗೆ ಆಕ್ಷೇಪ

ಹಿಂದಿನ ಸಮೀಕ್ಷೆಗೆ ಹೋಲಿಸಿದರೆ ಮರುಸಮೀಕ್ಷೆಯಲ್ಲಿ ಮಾಜಿ ದೇವದಾಸಿಯರ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿರುವುದಕ್ಕೆ ಕೆಲವು ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ

'ರಾಜ್ಯ ಸರ್ಕಾರ ನಡೆಸಿದ ಮಾಜಿ ದೇವದಾಸಿಯರ ಮರು ಸಮೀಕ್ಷೆ ಪ್ರಕ್ರಿಯೆಯು ದೇವದಾಸಿ ತಾಯಂದಿರು ಮತ್ತು ಅವರ ಅವಲಂಬಿತರ ಮೇಲಿನ ಅತಿ ದೊಡ್ಡ ಅನ್ಯಾಯ ಹಾಗೂ ಸಂಘಟಿತ ಮೋಸ. 2007-08ರಲ್ಲಿ ನಡೆದ ಸಮೀಕ್ಷೆಗಳಲ್ಲಿ 46,660 ದೇವದಾಸಿಯರನ್ನು ಗುರುತಿಸಲಾಗಿತ್ತು. ಈಗ ನಡೆದ ಮರು ಸಮೀಕ್ಷೆಯಲ್ಲಿ ಕೇವಲ 23,395 ಮಂದಿಯನ್ನು ಗುರುತಿಸಲಾಗಿದೆ. ಅಂದರೆ, ಉಳಿದ ಸಾವಿರಾರು ದೇವದಾಸಿಯರು ಎಲ್ಲಿಗೆ ಹೋದರು? ಹಠಾತ್ ಅಸ್ತಿತ್ವ ಇಲ್ಲದವರಾದರೇ? ಹೊಸಬರನ್ನು ಸೇರಿಸಿಕೊಳ್ಳುವ ನೆಪದಲ್ಲಿ ಈಗಾಗಲೇ ಗುರುತಿಸಲ್ಪಟ್ಟವರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆಯೇ? ಈ ಗಂಭೀರ ವ್ಯತ್ಯಾಸ ಸರ್ಕಾರದ ಸಮೀಕ್ಷೆಯ ನಂಬಿಕೆಯ ಮೇಲೆ ದೊಡ್ಡ ಹೊಡೆತ ಕೊಡುತ್ತದೆ. ಇದು ನಿರ್ಲಕ್ಷ್ಯವಲ್ಲ, ವ್ಯವಸ್ಥಿತವಾಗಿ ನಡೆದ ಮೋಸ' ಎಂದು ಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.

'ಈ ಮರು ಸಮೀಕ್ಷೆಯ ಪರಿಣಾಮವಾಗಿ ಸಾವಿರಾರು ದೇವದಾಸಿ ತಾಯಂದಿರು ಮತ್ತು ಅವರ ಅವಲಂಬಿತರು ಸರ್ಕಾರದ ಯೋಜನೆಗಳಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ವೇದಿಕೆ ಹೇಳಿದೆ.

## ಯಾವ ವಯೋಮಾನದವರು ಎಷ್ಟು?

| ವಯೋಮಾನ | ಸಂಖ್ಯೆ |
|---|---|
| 19-30 ವರ್ಷ | 2 |
| 30-45 ವರ್ಷ | 1,539 |
| 45-60 ವರ್ಷ | 11,311 |
| 60-65 ವರ್ಷ | 3,474 |
| 65-75 ವರ್ಷ | 4,674 |
| 75ಕ್ಕಿಂತ ಹೆಚ್ಚು | 2,395 |

## ಶೈಕ್ಷಣಿಕ ಮಾಹಿತಿ

| ಶಿಕ್ಷಣ | ಸಂಖ್ಯೆ |
|---|---|
| ಎಸ್‌ಎಸ್‌ಎಲ್‌ಸಿ | 110 |
| ಪಿಯುಸಿ, ಡಿಪ್ಲೊಮಾ | 44 |
| ಪದವಿ | 1 |
| ಸರ್ಟಿಫಿಕೇಟ್ ಕೋರ್ಸ್ | 2 |
| ಇತರ ವಿವಿಧ ಕೋರ್ಸ್ | 86 |

**21,474 (91.7 %) ಅನಕ್ಷರಸ್ಥರು**

ಬಾಗಲಕೋಟೆಯಲ್ಲಿ ಅತೀ ಹೆಚ್ಚು 3,825, ವಿಜಯನಗರದಲ್ಲಿ 3,445, ಬೆಳಗಾವಿಯಲ್ಲಿ 2,348, ಕೊಪ್ಪಳದಲ್ಲಿ 2,335 ಬಳ್ಳಾರಿಯಲ್ಲಿ 2,174 ಅನಕ್ಷರಸ್ಥರಿದ್ದಾರೆ

## ದೇವದಾಸಿ ಪುನರ್ವಸತಿ ಯೋಜನೆ

ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ದೇವದಾಸಿ ಪುನರ್ವಸತಿ ಯೋಜನೆಯಡಿ 2013-14ರಿಂದ 2024-25ನೇ ಸಾಲಿನವರೆಗೆ 13,663 ಮಾಜಿ ದೇವದಾಸಿಯರಿಗೆ ಸೌಲಭ್ಯ ಒದಗಿಸಿದೆ. 45 ವರ್ಷ ದಾಟಿದ ಮಾಜಿ ದೇವದಾಸಿಯರಿಗೆ ₹2 ಸಾವಿರ ಮಾಶಾಸನ ನೀಡಲಾಗುತ್ತಿದೆ. ಮರಣ ಹೊಂದಿದ ಮಾಜಿ ದೇವದಾಸಿಯರನ್ನು ಹೊರತುಪಡಿಸಿ 25,539 ಮಾಜಿ ದೇವದಾಸಿಯರಿಗೆ ಮಾಸಾಶನ (2022-23ನೇ ಸಾಲಿನಿಂದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಮೂಲಕ) ಒದಗಿಸಲಾಗುತ್ತಿದೆ. ನಿವೇಶನ ಹೊಂದಿರುವ ವಸತಿರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಇದುವರೆಗೆ 12,089 ದೇವದಾಸಿಯರಿಗೆ ಸೌಲಭ್ಯ ಒದಗಿಸಲಾಗಿದೆ ಎಂದು ಮಹಿಳಾ ಅಭಿವೃದ್ಧಿ ನಿಗಮ ಮಾಹಿತಿ ನೀಡಿದೆ.

## ಶಿಫಾರಸುಗಳೇನು?

- ಮಾಜಿ ದೇವದಾಸಿಯರು ಮತ್ತು ಅವರ ಮಕ್ಕಳ (1, 2 ಮತ್ತು 3ನೇ ತಲೆಮಾರು) ಅಭಿವೃದ್ಧಿಗೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು
- ಮಾಜಿ ದೇವದಾಸಿಯರ ಕುಟುಂಬಗಳಿಗೆ ಹಾಗೂ ಮಕ್ಕಳಿಗೆ ಗೌರವಯುತ ಹಾಗೂ ಘನತೆಯಿಂದ ಬದುಕುವ ಹಕ್ಕು ಕಲ್ಪಿಸಿ ಕೊಡಬೇಕಿದೆ. ಈ ಕುರಿತು ಸಂವೇದನಾಶೀಲರಾಗಿ ವರ್ತಿಸಲು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಶಾಲಾ ಕಾಲೇಜುಗಳಲ್ಲಿ ಹಾಗೂ ಇನ್ನಿತರ ಕೇಂದ್ರ ಹಾಗೂ ರಾಜ್ಯ ಕಚೇರಿಗಳಲ್ಲಿ ತಂದೆಯ ಹೆಸರು ನಮೂದಿಸುವುದರಿಂದ ವಿನಾಯಿತಿ ನೀಡಲು ಕ್ರಮ ವಹಿಸಬೇಕು
- ಶಿಕ್ಷಣಕ್ಕಾಗಿ ಆರ್ಥಿಕ ಸೌಲಭ್ಯ ಕಲ್ಪಿಸಬೇಕು
- ಅರ್ಜಿ ಹಾಕುವ ಎಲ್ಲ ಮಾಜಿ ದೇವದಾಸಿಯರ ಮಕ್ಕಳನ್ನು (ವಿದ್ಯಾರ್ಥಿಗಳು) ವಿವಿಧ ಇಲಾಖೆಗಳ ಎಸ್‌ಸಿ, ಎಸ್‌ಟಿ, ಬಿಸಿಎಂ ಮುಂತಾದ ಶೈಕ್ಷಣಿಕ ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಆದ್ಯತೆಯ ಮೇರೆಗೆ ದಾಖಲಾತಿ ಮಾಡಿಕೊಳ್ಳಬೇಕು. ವಿದ್ಯಾರ್ಥಿ ವೇತನ ನೀಡಲು ಯೋಜನೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಕೋಚಿಂಗ್ ನೀಡಬೇಕು
- ಶೇ 97.17 ಮಾಜಿ ದೇವದಾಸಿಯರು ಅನಕ್ಷರಸ್ಥರಾಗಿದ್ದು, ಅವರೆಲ್ಲರೂ ಮಧ್ಯವಯಸ್ಸನ್ನು ದಾಟಿದವರರಾಗಿರುವುದರಿಂದ ಅನೌಪಚಾರಿಕ ಶಿಕ್ಷಣ ಒದಗಿಸಬೇಕು
- ಸದ್ಯ ಕೇವಲ 630 ಮಂದಿ ಮಾತ್ರ ಆರೋಗ್ಯ ವಿಮೆ ಹೊಂದಿದ್ದಾರೆ. ಮಾಜಿ ದೇವದಾಸಿಯರು ಮತ್ತು ಅವರ ಮಕ್ಕಳ ಚಿಕಿತ್ಸೆಗೆ ಅನುಕೂಲವಾಗಲು ಆಯುಷ್ಮಾನ್ ಭಾರತ್ ಕಾರ್ಡುಗಳನ್ನು ವಿತರಿಸಬೇಕು
- ಸರ್ಕಾರಿ ಹಾಗೂ ಖಾಸಗಿ ಕಂಪನಿಗಳಲ್ಲಿ ಮಾಜಿ ದೇವದಾಸಿ ಮಕ್ಕಳಿಗೆ ಉದ್ಯೋಗಾವಕಾಶ ನೀಡಲು ಯೋಜನೆ ರೂಪಿಸಬೇಕು. ವಿವಿಧ ಇಲಾಖೆಗಳ ಮೂಲಕ ಆರ್ಥಿಕ ಚಟುವಟುಕೆಗಳಿಗೆ ಸಹಾಯಧನ ನೀಡಿ ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಮಾಡಿಕೊಡಲು ವಿಶೇಷ ಕಾರ್ಯಕ್ರಮ ರೂಪಿಸಬೇಕು
- ಕೌಶಲ ಅಭಿವೃದ್ಧಿ ಇಲಾಖೆ ಸೇರಿ ವಿವಿಧ ಇಲಾಖೆಗಳ ಮೂಲಕ ತರಬೇತಿ ಹಾಗೂ ಆರ್ಥಿಕ ಸೌಲಭ್ಯ ಒದಗಿಸಬೇಕು
- ಹೆಚ್ಚಿನ ಮಾಜಿ ದೇವದಾಸಿಯರು ಹಾಗೂ ಮಕ್ಕಳಿಗೆ ಜಾಬ್ ಕಾರ್ಡ್, ಸ್ವಸಹಾಯ ಸಂಘದ ಸದಸ್ಯತ್ವ ಹಾಗೂ ಕ್ರೆಡಿಟ್ ಸೊಸೈಟಿಗಳಲ್ಲಿ ನೋಂದಾಯಿಸಲು ಕ್ರಮವಹಿಸಬೇಕು. ಮಾಜಿ ದೇವದಾಸಿಯರು ಹಾಗೂ ವಯಸ್ಕರ ಮಕ್ಕಳ ತಲಾ ಆದಾಯ ವಾರ್ಷಿಕವಾಗಿ ತುಂಬಾ ಕಡಿಮೆ ಇದ್ದು, ತಲಾ ಆದಾಯ ಹೆಚ್ಚಿಸಲು ಅಗತ್ಯ ಆರ್ಥಿಕ ಆಧಾರಿತ ಸ್ವದ್ಯೋಗ ಸೌಲಭ್ಯ ಒದಗಿಸಬೇಕು
- ಹೆಚ್ಚಿನವರು ನಿವೇಶನ ರಹಿತರಾಗಿರುವುದರಿಂದ ನಿವೇಶನದ ಜೊತೆಗೆ ವಸತಿ ಸೌಲಭ್ಯ ಕಲ್ಪಿಸಬೇಕು. ಆಸಕ್ತಿ ಇರುವ ಮಹಿಳೆಯರಿಗೆ ಕೃಷಿ ಭೂಮಿ ಒದಗಿಸಬೇಕು
- ಸದ್ಯ ₹2,000 ಮಾಶಾಸನವಾಗಿ ನೀಡುತ್ತಿದ್ದು, ಕುಟುಂಬ ನಿರ್ವಹಣೆಗೆ ಕನಿಷ್ಠ ₹5,000 ಮಾಸಾಶನ ನೀಡಬೇಕು
- ಸಮೀಕ್ಷೆಯಲ್ಲಿ ಗುರುತಿಸಿರುವ ಮಾಜಿ ದೇವದಾಸಿಯರಲ್ಲಿ ಹೆಚ್ಚಿನವರು ಹಿರಿಯ ನಾಗರಿಕರಾಗಿದ್ದು, ಹಿರಿಯ ನಾಗರಿಕರಿಗೆ ಸಾಮಾನ್ಯವಾಗಿ ದೊರಕುತ್ತಿರುವ ಎಲ್ಲ ಸವಲತ್ತುಗಳನ್ನು ಇವರಿಗೂ ತಲುಪುವಂತೆ ನೋಡಿಕೊಳ್ಳಬೇಕು. ವಿಶೇಷ ಶಿಬಿರಗಳನ್ನು ಆಯೋಜಿಸಿ ಪಡಿತರ ಚೀಟಿಗಳನ್ನು ವಿತರಿಸಬೇಕು. 10,543 ಮಹಿಳೆಯರು 60 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದು, ಅವರಿಗೆ ಪ್ರತಿ ಜಿಲ್ಲೆಯಲ್ಲಿ ಒಂದು ಹಿರಿಯ ನಾಗರಿಕರ ಆರೈಕೆ ಕೇಂದ್ರ ಮತ್ತು ವೃದ್ಧಾಶ್ರಮಗಳ ಸೌಲಭ್ಯ ಕಲ್ಪಿಸಬೇಕು



Publication Date 16/02/2026

Dr. Rajkumar

# ಇಂದಿನಿಂದ ಭಾರತ ಮಂಟಪದಲ್ಲಿ ಎ.ಐ ಶೃಂಗ

**ನವದೆಹಲಿ (ಪಿಟಿಐ):** ಕೃತಕ ಬುದ್ಧಿಮತ್ತೆ ಕ್ಷೇತ್ರದ ಪ್ರಮುಖ ಕಂಪನಿಗಳು, ಜಾಗತಿಕ ನಾಯಕರನ್ನು ಒಂದೆಡೆ ಕರೆತರಲಿರುವ 'ಎ.ಐ. ಇಂಪ್ಯಾಕ್ಟ್ ಶೃಂಗ'ಕ್ಕೆ ಭಾರತವು ಆತಿಥ್ಯ ವಹಿಸಿದೆ. ಶೃಂಗವು ಸೋಮವಾರದಿಂದ ಶುಕ್ರವಾರದವರೆಗೆ ನವದೆಹಲಿಯ ಭಾರತ ಮಂಟಪದಲ್ಲಿ ನಡೆಯಲಿದೆ. ನೀತಿ ನಿರೂಪಕರು, ತಂತ್ರಜ್ಞಾನ ಕ್ಷೇತ್ರದ ಸಂಶೋಧಕರು ಕೂಡ ಈ ಶೃಂಗದಲ್ಲಿ ಭಾಗಿಯಾಗಲಿದ್ದಾರೆ.

ಭಾರತದ ಪಾಲಿಗೆ ಈ ಶೃಂಗವು ಮಹತ್ವದ್ದಾಗಲಿದೆ. ಇದು ಎ.ಐ. ಜಗತ್ತಿನಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸುವ, ತನ್ನ ಉದ್ದೇಶವನ್ನು ಹೇಳುವ ಅವಕಾಶವನ್ನು ಭಾರತಕ್ಕೆ ನೀಡಲಿದೆ. ಎ.ಐ. ಲೋಕಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಭಾರತದ ಉದ್ದೇಶವನ್ನು ಕೂಡ ಈ ಶೃಂಗವು ಹೇಳುತ್ತಿದೆ.

'ಎ.ಐ. ವಿಚಾರದಲ್ಲಿ ಆಗುವುದೆಲ್ಲವೂ ಮಾನವ ಕೇಂದ್ರಿತವಾಗಿ ಹಾಗೂ ಎಲ್ಲರನ್ನೂ ಒಳಗೊಳ್ಳುವ ಬಗೆಯಲ್ಲಿ ಇರಬೇಕು ಎಂಬುದು ಈ ಕಾರ್ಯಕ್ರಮದ ಮೂಲಕ ನಾವು ರವಾನಿಸಲು ಬಯಸುವ ಪ್ರಮುಖ ಸಂದೇಶ. ಎ.ಐ ಸಂಪನ್ಮೂಲವು ಎಲ್ಲರಿಗೂ ಲಭ್ಯವಿರುವಂತೆ ಕೂಡ ಆಗಬೇಕು' ಎಂದು ಕೇಂದ್ರದ ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿ ಎಸ್. ಕೃಷ್ಣನ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಜಗತ್ತಿನ ಹಲವು ನಾಯಕರು ಶೃಂಗಕ್ಕೆ ಬರಲಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮ್ಯಾಕ್ರನ್, ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಈ ಪೈಕಿ ಪ್ರಮುಖರು. 45ಕ್ಕೂ ಹೆಚ್ಚು ದೇಶಗಳ ಸಚಿವರ ನಿಯೋಗಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿವೆ. ಪ್ರಧಾನಿ ಮೋದಿ ಅವರು ಶೃಂಗವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಡೀಪ್‌ಫೇಕ್‌ಗಳು ಹಾಗೂ ಎ.ಐ ಆಧಾರಿತ ಸುಳ್ಳು ಮಾಹಿತಿಯನ್ನು ತಡೆಯಲು ಭಾರತವು ಯಾವೆಲ್ಲ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಈ ಶೃಂಗವು ಪ್ರಧಾನವಾಗಿ ತೋರಿಸಲಿದೆ.

ಐರೋಪ್ಯ ಒಕ್ಕೂಟವು ನಿಯಂತ್ರಣ ಕ್ರಮವು ಹೆಚ್ಚಿರುವ ಎ.ಐ ಕಾಯ್ದೆಯನ್ನು ಹೊಂದಿದೆ. ಅಮೆರಿಕವು ಮಾರುಕಟ್ಟೆಯ ಅಗತ್ಯವನ್ನು ಆಧರಿಸಿದ ಕಾನೂನು ಹೊಂದಿದೆ. ಆದರೆ ಭಾರತವು ಆವಿಷ್ಕಾರಕ್ಕೆ ಹೆಚ್ಚಿನ ಆದ್ಯತೆ ನೀಡುವ ಕ್ರಮವನ್ನು ಅನುಸರಿಸುತ್ತಿದೆ.

ಇದು ಅಭಿವೃದ್ಧಿ ಹೊಂದುತ್ತಿರುವ ದೇಶವೊಂದರಲ್ಲಿ ನಡೆಯುತ್ತಿರುವ ಜಾಗತಿಕ ಮಟ್ಟದ ಮೊದಲ ಎ.ಐ. ಶೃಂಗ ಕೂಡ ಹೌದು.

### ಯಾರೆಲ್ಲ ಬರುತ್ತಿದ್ದಾರೆ?

ಸುಂದರ್ ಪಿಚೈ (ಗೂಗಲ್ ಸಿಇಒ), ಸ್ಯಾಮ್ ಆಲ್ಟ್‌ಮ್ಯಾನ್ (ಓಪನ್ ಎಐ ಸಿಇಒ), ಡ್ಯಾರಿಯೊ ಅಮೊಡಿ (ಆ್ಯಂಥ್ರೊಪಿಕ್ ಸಿಇಒ), ಬ್ರ್ಯಾಡ್ ಸ್ಮಿತ್ (ಮೈಕ್ರೊಸಾಫ್ಟ್ ಅಧ್ಯಕ್ಷ).

## ಎ.ಐ: ಆರಂಭಿಕ ಹಂತದ ನೇಮಕಾತಿ ಮಂದಗತಿಗೆ: ವರದಿ

**ನವದೆಹಲಿ (ಪಿಟಿಐ):** ಕೃತಕ ಬುದ್ಧಿಮತ್ತೆ (ಎ.ಐ) ಅಳವಡಿಕೆಯ ಕಾರಣದಿಂದಾಗಿ ಕಂಪನಿಗಳು ನಡೆಸುವ ಆರಂಭಿಕ ಹಂತದ ಉದ್ಯೋಗಿಗಳ ನೇಮಕಾತಿಯ ಪ್ರಮಾಣವು ಮಂದಗತಿಗೆ ತಿರುಗಿದೆ ಎಂದು ಐಸಿಆರ್‌ಐಇಆರ್ ವರದಿ ಹೇಳಿದೆ.




ಓಪನ್ ಎ.ಐ ಸಹಕಾರದೊಂದಿಗೆ ಅಂತರರಾಷ್ಟ್ರೀಯ ಆರ್ಥಿಕ ಬಾಂಧವ್ಯಕ್ಕೆ ಸಂಬಂಧಿಸಿದ ಭಾರತದ ಸಂಶೋಧನಾ ಮಂಡಳಿಯು (ಐಸಿಆರ್‌ಐಇಆರ್) ನಡೆಸಿದ ಅಧ್ಯಯನವು, ವಿವಿಧ ವಲಯಗಳಲ್ಲಿ ಎ.ಐ ಬಳಕೆಯು ನೇಮಕಾತಿಯಲ್ಲಿನ ಆದ್ಯತೆಗಳನ್ನು ಬದಲಾಯಿಸಿದೆ ಎಂದು ಹೇಳಿದೆ.

ನಿರ್ದಿಷ್ಟ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರು ಮತ್ತು ಎ.ಐ ಅಥವಾ ದತ್ತಾಂಶ ಕೌಶಲ ಹೊಂದಿರುವ ಅಭ್ಯರ್ಥಿಗಳಿಗೆ ಬೇಡಿಕೆ ಹೆಚ್ಚಿದೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ ಶೇ 63ರಷ್ಟು ಕಂಪನಿಗಳು ಹೇಳಿವೆ.

ದೇಶದ 10 ನಗರಗಳಲ್ಲಿನ 650 ಮಾಹಿತಿ ತಂತ್ರಜ್ಞಾನ ಕಂಪನಿಗಳಿಂದ ಸಂಗ್ರಹಿಸಿದ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ. ಕಳೆದ ನವೆಂಬರ್‌ನಿಂದ ಈ ಜನವರಿವರೆಗೆ ಅಧ್ಯಯನ ನಡೆಸಲಾಗಿದೆ.

ತಂತ್ರಾಂಶ ಅಭಿವೃದ್ಧಿಪಡಿಸುವವರು ಮತ್ತು ದತ್ತಾಂಶಕೋಶ ನಿರ್ವಾಹಕರಿಗೆ ಬೇಡಿಕೆ ಹೆಚ್ಚಳವಾಗುತ್ತಿದೆ. ಶೇ 50ರಷ್ಟಕ್ಕಿಂತ ಹೆಚ್ಚು ಕಂಪನಿಗಳು ವಿವಿಧ ತರಬೇತಿಗಳ ಮೂಲಕ ಈಗಾಗಲೇ ಎ.ಐ ಬಳಕೆಗೆ ನೆರವು ನೀಡುತ್ತಿವೆ ಎಂದು ವರದಿ ತಿಳಿಸಿದೆ.

ಆದರೆ, ತರಬೇತಿ ನೀಡುವ ಪ್ರಮಾಣ ಕಡಿಮೆ ಇದೆ. ಅರ್ಹತೆ ಹೊಂದಿರುವ ತರಬೇತುದಾರರು ಸಿಗುತ್ತಿಲ್ಲ. ಹೆಚ್ಚಿನ ವೆಚ್ಚ ಮತ್ತು ಅನಿಶ್ಚಿತ ಗಳಿಕೆ ಸೇರಿದಂತೆ ವಿವಿಧ ಅಂಶಗಳು ವಲಯಕ್ಕೆ ಪ್ರಮುಖ ಸವಾಲಾಗಿವೆ ಎಂದು ಹೇಳಿದೆ.

# 'ಭಾರತದ ಜೊತೆ ಹೊಸ ಸಂಬಂಧಕ್ಕೆ ಬಾಂಗ್ಲಾ ಸಿದ್ಧ'

**ಢಾಕಾ (ಪಿಟಿಐ):** 'ಬಾಂಗ್ಲಾದೇಶದ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಅವಾಮಿ ಲೀಗ್ ಮತ್ತು ಶೇಖ್ ಹಸೀನಾ ಇಂದಿನ ಬಾಂಗ್ಲಾದಲ್ಲಿ ಇಲ್ಲ. ಭಾರತವು ಇದನ್ನು ಅರ್ಥ ಮಾಡಿ ಕೊಳ್ಳಬೇಕು. ಪರಸ್ಪರ ಲಾಭಕ್ಕಾಗಿ ಹೊಸ ಹೆಜ್ಜೆಗಳೊಂದಿಗೆ, ಹೊಸ ಸಂಬಂಧವನ್ನು ಆರಂಭಿಸಲು ನಾವು ತಯಾರಿದ್ದೇವೆ' ಎಂದು ಬಿಎನ್‌ಪಿ ಮುಖ್ಯಸ್ಥ ತಾರಿಕ್ ರೆಹಮಾನ್ ಅವರ ಸಲಹೆ ಗಾರ ಹುಮಾಯೂನ್ ಕಬೀರ್ ಹೇಳಿದರು.

'ಪಿಟಿಐ' ಸುದ್ದಿ ಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ಬಿಎನ್‌ಪಿಗೆ ಸಿಕ್ಕ ಅಭೂತಪೂರ್ವ ಗೆಲುವನ್ನು ಭಾರತ ಮನಗಾಣಬೇಕು. ದೇಶದ ಬದಲಾವಣೆಯನ್ನು ಸ್ವೀಕರಿಸಿ ಅದನ್ನು ಒಪ್ಪಿಕೊಳ್ಳುವುದು ಭಾರತದ ಹೊಣೆಗಾರಿಕೆ' ಎಂದರು.

ಹಸೀನಾ ಅವರನ್ನು ಬಾಂಗ್ಲಾಕ್ಕೆ ವಾಪಸು ಕಳುಹಿಸಿಕೊಡುವ ವಿಚಾರದ ಕುರಿತು ಪ್ರಕ್ರಿಯಿಸಿ, 'ನಮ್ಮ ದೇಶದ ಸಾರ್ವಭೌಮತ್ವಕ್ಕೆ ಧಕ್ಕೆಯಾಗುವಂಥ ಚಟುವಟಿಕೆಗಳಿಗೆ ಭಾರತವು ತನ್ನ ನೆಲದಲ್ಲಿ ಅವಕಾಶ ನೀಡಬಾರದು. ಇದು ಸಾಧ್ಯವಾಗದ ಹೊರತು, ಭಾರತದೊಂದಿಗೆ ಸಹಜವಾದ ರಾಜತಾಂತ್ರಿಕ ಸಹಕಾರ ಅಸಾಧ್ಯ' ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ತಾರಿಕ್ ಅವರನ್ನು ಭಾರತಕ್ಕೆ ಭೇಟಿ ನೀಡಲು ಆಹ್ವಾನಿಸಿದ್ದರ ಕುರಿತ ಪ್ರಶ್ನೆಗೆ ಉತ್ತರಿಸಿ, 'ತಾರಿಕ್ ಅವರು ಮೊದಲು ದೇಶದ ಸಮೃದ್ಧಿ, ಆರ್ಥಿಕ ಭದ್ರತೆಗೆ ಕಡೆಗೆ ಒತ್ತು ನೀಡಲಿದ್ದಾರೆ. ಈ ಎಲ್ಲವೂ ಒಂದು ಹಂತಕ್ಕೆ ಬಂದ ನಂತರವೇ ಅವರು ವಿದೇಶ ಭೇಟಿ ಆರಂಭಿಸಲಿದ್ದಾರೆ' ಎಂದರು.

## ಘಟಿಯಾನಾ ಪ್ರಭೇದಕ್ಕೆ ಸೇರಿದ, ಸಿಹಿ ನೀರಿನಲ್ಲಿ ವಾಸವಿರುವ ಜೀವಿ

# ಪಶ್ಚಿಮ ಘಟ್ಟದಲ್ಲಿ ಹೊಸ ಪ್ರಭೇದದ ಏಡಿ ಪತ್ತೆ

ಪ್ರಜಾವಾಣಿ ವಾರ್ತೆ

ಕಾರವಾರ: ಪಶ್ಚಿಮ ಘಟ್ಟದ ನಿರ್ದಿಷ್ಟ ಭಾಗದಲ್ಲಿ ಕಂಡುಬರುವ ಹೊಸ ಪ್ರಭೇದದ ಸಿಹಿ ನೀರಿನ ಏಡಿಯನ್ನು ಅರಣ್ಯ ಗಸ್ತು ಪಾಲಕರಿಬ್ಬರು ತಾಲ್ಲೂಕಿನ ದೇವಳಮಕ್ಕಿ ಅರಣ್ಯದಲ್ಲಿ ಗುರುತಿಸಿದ್ದಾರೆ.

ಹೊಸ ಪ್ರಭೇದದ ಏಡಿಗೆ ‘ಘಟಿಯಾನಾ ಧೃತಿಯರಮ್’ ಎಂದು ಹೆಸರಿಡಲಾಗಿದೆ. ಇದು, ಭಾರತದಲ್ಲಿ ಕಂಡುಬಂದಿರುವ 77ನೇ ಪ್ರಭೇದ ಹಾಗೂ ಪಶ್ಚಿಮಘಟ್ಟದಲ್ಲಿ ಕಾಣಸಿಗುವ ಘಟಿಯಾನಾ ಪ್ರಭೇದದ 14ನೇ ಹೊಸ ಏಡಿ ಎಂಬುದನ್ನು ಭಾರತೀಯ ಪ್ರಾಣಿಶಾಸ್ತ್ರ ಸಮೀಕ್ಷೆ ಸಂಸ್ಥೆಯು (ಝಡ್ಎಸ್ಐ) ದೃಢಪಡಿಸಿದೆ.

ಅರಣ್ಯ ಗಸ್ತು ಪಾಲಕರಾದ ಗೋಪಾಲ ನಾಯ್ಕ ಮತ್ತು ಸುನಿಲ ಗೌಡ ಅವರು ಈ ಏಡಿಯನ್ನು ಗುರುತಿಸಿದ್ದಾರೆ. ಇದು ಹೊಸ ಪ್ರಭೇದದ್ದು ಎಂಬುದರ ಖಾತರಿಗೆ ಮೂರು ವರ್ಷಗಳಿಂದ ಅವರು ಅಧ್ಯಯನ ನಡೆಸಿದ್ದರು.



- ಪಶ್ಚಿಮ ಘಟ್ಟದಲ್ಲಿ ಕಾಣ ಸಿಗುವ ಘಟಿಯಾನಾ ಪ್ರಭೇದದ 14ನೇ ಹೊಸ ಏಡಿ
- ಮರದ ಪೊಟರೆ, ಜಂಬುಮಣ್ಣಿನ ನೀರು ತುಂಬಿದ ರಂಧ್ರಗಳಲ್ಲಿ ವಾಸ
- ಇಬ್ಬರು ಅರಣ್ಯ ಗಸ್ತು ಪಾಲಕರಿಂದ ಮೂರು ವರ್ಷಗಳಿಂದ ಅಧ್ಯಯನ

ಪಶ್ಚಿಮ ಘಟ್ಟದಲ್ಲಿ ಪತ್ತೆಯಾಗಿರುವ ಘಟಿಯಾನಾ ಧೃತಿಯರಮ್ ಏಡಿ

‘ಘಟಿಯಾನ ಧೃತಿಯರಮ್ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಮರದ ಪೊಟರೆ ಮತ್ತು ಜಂಬುಮಣ್ಣಿನ (ಲ್ಯಾಟರೈಟ್) ಬಂಡೆಗಳ ನೀರು ತುಂಬಿದ ರಂಧ್ರಗಳಲ್ಲಿ ವಾಸಿಸುತ್ತವೆ. ಶಿರ್ವೆ, ದೇವಳಮಕ್ಕಿಯ ಸುತ್ತಮುತ್ತಲಿನ 24 ಕಿ.ಮೀ ಅರಣ್ಯ ಪ್ರದೇಶದಲ್ಲಿ ಮಾತ್ರ ಇವು ವಾಸವಾಗಿವೆ. ದಟ್ಟ ಅರಣ್ಯ, ಹುಲ್ಲುಗಾವಲು ಭೂಮಿಯಲ್ಲಿ ಮಾತ್ರ ಇವು ಕಾಣಸಿಗುತ್ತವೆ’ ಎಂದು ಗೋಪಾಲ ನಾಯ್ಕ ವಿವರಿಸಿದ್ದಾರೆ.

‘ಈ ಏಡಿಗಳು ಮರಿಗಳ ಹಂತದಲ್ಲಿ ತಲೆಮೇಲೆ ಕಪ್ಪು ಮತ್ತು ಕಾಲುಗಳು ಸಹ ಕಪ್ಪು ಬಣ್ಣದ್ದಾಗಿರುತ್ತವೆ. ಇದರ ಮೇಲಿನ ಭಾಗವು ಹಾಲಿನ ಕೆನೆ ಬಣ್ಣ ಮತ್ತು ಕಪ್ಪು ಬಣ್ಣದಿಂದ, ಕೆಳಭಾಗದಲ್ಲಿ ನೇರಳೆ ಬಣ್ಣದಿಂದ ಕೂಡಿದೆ. ಪ್ರೌಢಾವಸ್ಥೆ ಹಂತದಲ್ಲಿ ಕಾಲುಗಳು ಸಂಪೂರ್ಣ ಕಿತ್ತಳೆ ಬಣ್ಣ ಹೊಂದಿರುತ್ತವೆ’ ಎಂದು ಸಂಶೋಧನೆಗೆ ಮಾರ್ಗದರ್ಶನ ನೀಡಿದ ಗದಗದ ಜೀವ ವೈವಿಧ್ಯ ಸಂಶೋಧಕ ಮಂಜುನಾಥ ನಾಯಕ ಹೇಳಿದರು.

‘ಈ ಏಡಿಗಳು ಬಹು ಆಳದವರೆಗೆ ರಂಧ್ರ ಕೊರೆಯುವುದರಿಂದ ಅಂತರ್ಜಲ ವೃದ್ಧಿಗೆ ಸಹಕಾರಿಯಾಗಿವೆ. ಅಲ್ಲದೆ, ಅವು ವಿಸರ್ಜಿಸುವ ಮಲದಿಂದ ಸಸ್ಯ ಸಂಪತ್ತು ಬೆಳೆಯಲು ಪೋಷಕಾಂಶ ಸಿಗುತ್ತಿವೆ. ಹೀಗಾಗಿ ಘಟಿಯಾನಾ ಧೃತಿಯರಮ್ ಕಾಣ ಸಿಗುವ ಪ್ರದೇಶ ಸಮೃದ್ಧ ಅರಣ್ಯ ಎಂಬುದಾಗಿ ಪರಿಗಣಿಸಬಹುದು’ ಎಂದು ಹೇಳಿದರು. ‘ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿ ವೈಜ್ಞಾನಿಕ ದೃಷ್ಟಿಕೋನದಿಂದ ಕಾರ್ಯನಿರ್ವಹಿಸಿ ಹೊಸ ಪ್ರಭೇದದ ಏಡಿ ಗುರುತಿಸಿದ್ದಾರೆ’ ಎಂದು ಕಾರವಾರ ಡಿಸಿಎಫ್ ಸಿ.ರವಿಶಂಕರ ಅಭಿಪ್ರಾಯಪಟ್ಟರು.

# ದತ್ತಾಂಶ ರಕ್ಷಣೆ: ಕೇಂದ್ರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ (ಡಿಪಿಡಿಪಿ) ಕಾಯ್ದೆ–2023 ಹಲವಾರು ನಿಬಂಧನೆಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ನೀಡಿದೆ.



‘ಸಂಸತ್ತಿನಲ್ಲಿ ಜಾರಿಯಾದ ನಿಬಂಧನೆಗಳ ಕುರಿತು ನಾವು ಆಲಿಸದೇ, ಮಧ್ಯಂತರ ತಡೆ ನೀಡಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಡಿಪಿಡಿಪಿ ಕಾಯ್ದೆ ಹಾಗೂ ಮಾಹಿತಿ ಹಕ್ಕು ಕಾಯ್ದೆಯ ನಿಬಂಧನೆಗಳ ಡಿಜಿಟಲ್ ದತ್ತಾಂಶ ಕಾಯ್ದೆಗೆ ಸಂಬಂಧಿಸಿ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ಕುರಿತು ಉತ್ತರಿಸಲು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸುವಂತೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ, ನ್ಯಾ. ವಿಪುಲ್ ಎಂ ಪಂಚೋಲಿ ಅವರಿದ್ದ ಪೀಠವು ತಿಳಿಸಿದೆ.

Publication Date
17/02/2026

Presented by ಪ್ರಜಾವಾಣಿ

# ಕೇಂದ್ರದ ಸಕ್ಷಮ್ ಯೋಜನೆ 17,454 ಟಿ.ವಿ ಪೂರೈಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರದ ಸಕ್ಷಮ್ ಯೋಜನೆ ಅಡಿ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ 17,454 ಎಲ್ಇಡಿ ಟಿ.ವಿಗಳನ್ನು ಪೂರೈಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೇಳಿದೆ.

ಸಕ್ಷಮ್ ಯೋಜನೆಯ ಅಂಗನವಾಡಿ ಕಟ್ಟಡಗಳ ಉನ್ನತೀಕರಣದಡಿ ಆರ್ಥಿಕ ಇಲಾಖೆಯ ಒಪ್ಪಿಗೆ ನಂತರ 2024ರ ನವೆಂಬರ್‌ನಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿತ್ತು. ಬಳಿಕ, ಜಿಇಎಂ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿ ನಿಯಮಾನುಸಾರ ಟಿ.ವಿಗಳನ್ನು ಖರೀದಿಸಿ, ಸರಬರಾಜು ಮಾಡಲಾಗಿದೆ ಎಂದು ಸ್ಪಷ್ಟನೆ ನೀಡಿದೆ.

'ಪ್ರಜಾವಾಣಿ'ಯ ಫೆ.6ರ ಸಂಚಿಕೆಯಲ್ಲಿ ಪ್ರಕಟವಾದ 'ಟೆಂಡರ್ ಬಿಟ್ಟು ಟಿ.ವಿ ಖರೀದಿ' ವರದಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಅಡಿ 15,000 ಟಿ.ವಿ ಖರೀದಿಸಲಾಗಿದೆ ಎಂದಿದೆ. ಆದರೆ, ಪೂರೈಸಿದ್ದು 17,454. ಯಾವುದೇ ರೀತಿಯ ಖರೀದಿ ನಿಯಮಗಳ ಉಲ್ಲಂಘನೆ ಆಗಿಲ್ಲ ಎಂದು ಇಲಾಖೆಯ ನಿರ್ದೇಶಕರು ಹೇಳಿದ್ದಾರೆ.

# ಎಸ್ಕಾಂಗಳಿಗೆ ₹34,980 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದ ಐದು ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) 2025ನೇ ಆರ್ಥಿಕ ವರ್ಷದಲ್ಲಿ ₹34,980 ಕೋಟಿ ನಷ್ಟದಲ್ಲಿವೆ. ಜತೆಗೆ, ₹47,993 ಕೋಟಿ ಸಾಲದ ಹೊರೆಯನ್ನೂ ಹೊತ್ತಿವೆ.

ಕೇಂದ್ರ ಇಂಧನ ಸಚಿವಾಲಯವು ಇತ್ತೀಚೆಗೆ ಬಿಡುಗಡೆ ಮಾಡಿರುವ ವಿದ್ಯುತ್ ಸರಬರಾಜು ಕಂಪನಿಗಳ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿ ಈ ಬಗ್ಗೆ ಉಲ್ಲೇಖ ಇದೆ. ತಮಿಳುನಾಡಿನ ಎಸ್ಕಾಂಗಳು (₹1.19 ಲಕ್ಷ ಕೋಟಿ) ಅತ್ಯಧಿಕ ನಷ್ಟ ಅನುಭವಿಸಿವೆ. ನಂತರದ ಸ್ಥಾನಗಳಲ್ಲಿ ಉತ್ತರ ಪ್ರದೇಶ, ರಾಜಸ್ಥಾನ, ತೆಲಂಗಾಣ, ಮಧ್ಯ ಪ್ರದೇಶ ಹಾಗೂ ಕರ್ನಾಟಕದ ಎಸ್ಕಾಂಗಳಿವೆ.

ಸಚಿವಾಲಯವು ದೇಶದ 54 ಕಂಪನಿಗಳ ಕಾರ್ಯಕ್ಷಮತೆ ಮೌಲ್ಯಮಾಪನ ಮಾಡಿದೆ. ಶ್ರೇಯಾಂಕದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ರೆಡ್ ಕಾರ್ಡ್ ಪಡೆದು 51ನೇ ಸ್ಥಾನದಲ್ಲಿದೆ. ರಾಜ್ಯದ ಯಾವುದೇ ಕಂಪನಿಯು ಅಗ್ರ 10ರಲ್ಲಿ ಸ್ಥಾನ ಪಡೆದಿಲ್ಲ.

# ‘ಎ.ಐ ಬಳಕೆ–ಮುಂಚೂಣಿಯಲ್ಲಿ ಭಾರತ’

## ಭಾರತ ಮಂಟಪದಲ್ಲಿ ಆರಂಭವಾದ ಶೃಂಗ • ಆರೋಗ್ಯ, ಶಿಕ್ಷಣ, ಕೃಷಿ, ಆಡಳಿತ, ಉದ್ಯಮ ಕ್ಷೇತ್ರಕ್ಕೆ ಒತ್ತು

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಬಳಕೆಯಲ್ಲಿ ಭಾರತವು ಮುಂಚೂಣಿಯಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.



ನರೇಂದ್ರ ಮೋದಿ

ಎ.ಐ ಕ್ಷೇತ್ರದಲ್ಲಿ ಭಾರತವು ದಾಪುಗಾಲಿಡುತ್ತಿರುವುದು ದೇಶದ ಮಹತ್ವಾಕಾಂಕ್ಷೆ ಮತ್ತು ಹೊಣೆಗಾರಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

‘ಎ.ಐ ಕುರಿತ ಚರ್ಚೆಗಾಗಿ ಜಗತ್ತನ್ನು ಒಟ್ಟುಗೂಡಿಸಲಾಗಿದೆ. ಭಾರತವು ಶೃಂಗದ ಆತಿಥ್ಯ ವಹಿಸಿದೆ. ಜಾಗತಿಕ ನಾಯಕರು, ಕೈಗಾರಿಕೋದ್ಯಮಿಗಳು, ನೀತಿ ನಿರೂಪಕರು, ಸಂಶೋಧಕರು ಮತ್ತು ತಂತ್ರಜ್ಞಾನ ಆಸಕ್ತರಿಗೆ ಸ್ವಾಗತ’ ಎಂದು ‘ಎಕ್ಸ್’ನಲ್ಲಿ ಮೋದಿ ಹೇಳಿದ್ದಾರೆ.

‘ಸರ್ವಜನ ಹಿತಾಯ, ಸರ್ವಜನ ಸುಖಾಯ’ ಎಂಬ ಧ್ಯೇಯವಾಕ್ಯದಡಿಯಲ್ಲಿ ಶೃಂಗವನ್ನು ಆಯೋಜಿಸಲಾಗಿದೆ. ಇದು ಮಾನವ ಕೇಂದ್ರಿತ ಪ್ರಗತಿಗಾಗಿ ಎ.ಐ ಬಳಕೆ ಮಾಡುವ ನಮ್ಮೆಲ್ಲರ ಬದ್ಧತೆಯ ಸಂಕೇತ’ ಎಂದಿದ್ದಾರೆ.

‘ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಆಡಳಿತ ಮತ್ತು ಉದ್ಯಮ ಕ್ಷೇತ್ರಗಳು ಎ.ಐನಿಂದಾಗಿ ಸ್ಥಿತ್ಯಂತರಗೊಳ್ಳುತ್ತಿವೆ. ಎ.ಐ ಶೃಂಗದ ನಿರ್ಣಯಗಳು ಭವಿಷ್ಯವನ್ನು ರೂಪಿಸಲಿದೆ ಎಂಬ ವಿಶ್ವಾಸವಿದೆ’ ಎಂದು ಹೇಳಿದ್ದಾರೆ.

### ಸೆಮಿಕಂಡಕ್ಟರ್: ಶೀಘ್ರ ತಯಾರಿಕೆ

‘ಭಾರತದ ಸೆಮಿಕಂಡಕ್ಟರ್ ಅಭಿಯಾನದ (ಐಎಸ್‌ಎಂ 1.0) ಅಡಿಯಲ್ಲಿ ಅನುಮೋದನೆಗೊಂಡಿರುವ 10 ಯೋಜನೆಗಳ ಪೈಕಿ ಮೊದಲ ಯೋಜನೆಯ ವಾಣಿಜ್ಯ ತಯಾರಿಕೆಯು ಫೆಬ್ರುವರಿ ಅಂತ್ಯದ ವೇಳೆ ಆರಂಭಗೊಳ್ಳಲಿದೆ’ ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್.ಕೃಷ್ಣನ್ ಸೋಮವಾರ ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ಕೃತಕ ಬುದ್ಧಿಮತ್ತೆ ಶೃಂಗದಲ್ಲಿ ಮಾತನಾಡಿರುವ ಕೃಷ್ಣನ್, ಸೆಮಿಕಂಡಕ್ಟರ್ ಉತ್ಪಾದನಾ ಸಂಸ್ಥೆ ಮೈಕ್ರಾನ್, ಚಿಪ್‌ಗಳ ಉತ್ಪಾದನೆ ಆರಂಭಿಸಲಿದೆ. ಮೊದಲ ಹಂತದಲ್ಲಿ ಎಐ ಪ್ರಕ್ರಿಯೆ ಕ್ಷಿಪ್ರಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ಹೈ–ಬ್ಯಾಂಡ್‌ವಿಡ್ತ್ ಮೆಮೊರಿ (ಎಚ್‌ಬಿಎಂ) ಚಿಪ್‌ಗಳ ಉತ್ಪಾದನೆಯತ್ತ ಗಮನಹರಿಸಲಿದೆ ಎಂದಿದ್ದಾರೆ.

**ಭಾರತದಲ್ಲಿ ಉತ್ತಮ ಡಿಜಿಟಲ್ ಮೂಲಸೌಕರ್ಯವಿದೆ, ಪ್ರತಿಭಾನ್ವಿತರಿದ್ದಾರೆ. ಹೀಗಾಗಿ ಎಐ ಕ್ಷೇತ್ರದಲ್ಲಿ ಸಾಧಿಸಲು ಇಲ್ಲಿ ವಿಪುಲವಾದ ಅವಕಾಶಗಳಿವೆ**
**ಇವಾನಾ ಬಾರ್ಟೋಲೆಟ್ಟಿ,**
ಎಐ ಗವರ್ನೆನ್ಸ್ ಆಫೀಸರ್, ವಿಪ್ರೊ

**ಎಐ ಕ್ಷೇತ್ರದಲ್ಲಿನ ಭಾರತ– ಅಮೆರಿಕ ಪಾಲುದಾರಿಕೆಯು ಆರೋಗ್ಯ, ಶಿಕ್ಷಣ, ಉದ್ಯೋಗ ತರಬೇತಿ, ಡಿಜಿಟಲ್ ಸಾಕ್ಷರತೆ ವಲಯಗಳಲ್ಲಿ ಅಸಾಧಾರಣ ಅವಕಾಶಗಳನ್ನು ಸೃಷ್ಟಿಸಲಿದೆ**
**ಬಿಪುಲ್ ಸಿಹ್ನಾ,**
ರುಬ್ರಿಕ್ ಸಿಇಒ

### ‘ಮಕ್ಕಳ ಮಾಹಿತಿ, ಗೋಪ್ಯತೆ ರಕ್ಷಿಸಿ’

ನವದೆಹಲಿ: ‘ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಸರ್ಕಾರಿ ನಿಯಮ, ಕಾನೂನು ಮತ್ತು ನೀತಿಗಳನ್ನು ರೂಪಿಸುವಾಗ ಮಕ್ಕಳ ಹಕ್ಕುಗಳ ಮೇಲೆ ಅವು ಬೀರುವ ಪರಿಣಾಮಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಮಕ್ಕಳ ಮಾಹಿತಿ ಮತ್ತು ಅವರ ಗೋಪ್ಯತೆಯನ್ನು ರಕ್ಷಿಸುವುದು ಅತ್ಯಗತ್ಯ’ ಎಂದು ಯುನಿಸೆಫ್‌ನ ‘ಎಐ ಮತ್ತು ಮಕ್ಕಳ 3.0’ ಮಾರ್ಗಸೂಚಿ ಹೇಳಿದೆ. ಎಐ ಶೃಂಗಸಭೆಯಲ್ಲಿ ಆಯೋಜಿಸಿದ್ದ ಗೋಷ್ಠಿಯಲ್ಲಿ ಈ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಯಿತು.

### ಎ.ಐ ನೆರವಿನೊಂದಿಗೆ ಕೃಷಿ: ಕರ್ನಾಟಕದಲ್ಲಿ ₹214 ಕೋಟಿ ಹೂಡಿಕೆ

ರಾಜ್ಯದಲ್ಲಿ ಬೆಳೆಬಾಳುವ ಮಸಾಲೆಗಳು ಮತ್ತು ಔಷಧೀಯ ಸಸ್ಯಗಳನ್ನು ಬೆಳೆಯಲು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನಗಳನ್ನು ಒಳಗೊಂಡ ಹೈಡ್ರೋಪೋನಿಕ್ ಕೃಷಿಯಲ್ಲಿ ₹214 ಕೋಟಿಗಳನ್ನು ಹೂಡಿಕೆ ಮಾಡಲು ಉದ್ಯಮಿಯೊಬ್ಬರು ಮುಂದೆ ಬಂದಿದ್ದಾರೆ.

ಮಂಗಳೂರಿನ ಪನಾಮ ಹೈಡ್ರೋ–ಎಕ್ಸ್‌ನ ಸ್ಥಾಪಕ ಮತ್ತು ಸಿಇಒ ವಿವೇಕ್ ರಾಜ್ ಈ ಸಾಹಸವನ್ನು ಮಾಡುತ್ತಿರುವ ಉದ್ಯಮಿ. ಅವರ ಕಂಪನಿಯು ಹಲವಾರು ವರ್ಷಗಳಿಂದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ₹146 ಕೋಟಿಗಳನ್ನು ಖರ್ಚು ಮಾಡಿದ್ದು, ಅದರೊಂದಿಗೆ ನಾಲ್ಕು ಪೇಟೆಂಟ್ ಪಡೆದ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ.

ಈ ತಂತ್ರಜ್ಞಾನದಲ್ಲಿ ಭೌತಿಕವಾಗಿ ಲಕ್ಷಣಗಳು ಕಾಣಿಸಿಕೊಳ್ಳುವ ಮೊದಲೇ ಬೆಳೆಗಳ ರೋಗಗಳನ್ನು ಪತ್ತೆಹಚ್ಚುವ ಮತ್ತು ದ್ಯುತಿ ಸಂಶ್ಲೇಷಣೆಗಾಗಿ ಅತ್ಯುತ್ತಮವಾದ ಕೃತಕ ಬೆಳಕನ್ನು ಒದಗಿಸುವ ವ್ಯವಸ್ಥೆ ಇರಲಿವೆ ಎಂದು ಎಐ ಇಂಪ್ಯಾಕ್ಟ್ ಶೃಂಗಸಭೆ 2026ಕ್ಕೆ ಬಂದಿದ್ದ ವಿವೇಕ್ ಹೇಳಿದ್ದಾರೆ.

ದಶಕದ ಹಿಂದೆ ಬರಗಾಲದಿಂದ ತಮ್ಮ ಬೆಳೆಯನ್ನು ಸಂಪೂರ್ಣವಾಗಿ ವಿವೇಕ್ ಕಳೆದುಕೊಂಡಿದ್ದರು.

ಕಂಪನಿಯು ರಾಜ್ಯದ ಮೂಡಬಿದಿರೆಯಲ್ಲಿ 16 ಎಕರೆ ಕೃಷಿ ಭೂಮಿಯನ್ನು ಹೊಂದಿದ್ದು, 2026ರ ಅಂತ್ಯದ ವೇಳೆಗೆ ಅಲ್ಲಿ ಹೈಡ್ರೋಪೋನಿಕ್ ಕೃಷಿಗೆ ಬೇಕಾದ ಮೂಲಸೌಕರ್ಯ ನಿರ್ಮಾಣವಾಗಲಿದೆ. 2027ರ ಜೂನ್ ವೇಳೆ ವಾಣಿಜ್ಯ ಕೊಯ್ಲನ್ನು ನಿರೀಕ್ಷಿಸಲಾಗಿದೆ.



**ನಮ್ಮ ಎಐ ತಂತ್ರಜ್ಞಾನಗಳಿಗೆ ಯುನೈಟೆಡ್ ಕಿಂಗ್‌ಡಮ್ ಮತ್ತು ಆಸ್ಟ್ರೇಲಿಯಾದಿಂದ ಪೇಟೆಂಟ್‌ಗಳನ್ನು ಪಡೆದುಕೊಂಡಿದ್ದೇವೆ. ನಾವು ಇದನ್ನು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನ ಮಾಡುತ್ತಿದ್ದೇವೆ**
**ವಿವೇಕ್ ರಾಜ್,** ಪನಾಮ ಹೈಡ್ರೋ–ಎಕ್ಸ್‌ನ ಸ್ಥಾಪಕ ಮತ್ತು ಸಿಇಒ

### ಎ.ಐ ಶೃಂಗವು ಮಹತ್ವದ್ದಾಗಿದೆ: ಬ್ರಿಟನ್ ಉಪಪ್ರಧಾನಿ

ಲಂಡನ್ (ಪಿಟಿಐ): ಕೃತಕಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಬೆಳವಣಿಗೆ ಮೇಲೆ ಹೇಗೆ ಪರಿಣಾಮ ಬೀರಲಿದೆ, ಉದ್ಯೋಗಾವಕಾಶಗಳನ್ನು ಹೇಗೆ ಸೃಷ್ಟಿಸಲಿದೆ, ಸಾರ್ವಜನಿಕ ಸೇವೆಗಳನ್ನು ಹೇಗೆ ಸುಧಾರಿಸಲಿದೆ ಮತ್ತು ಜಗತ್ತಿನಾದ್ಯಂತ ಜನರಿಗೆ ಯಾವ ರೀತಿ ಅನುಕೂಲ ಕಲ್ಪಿಸಲಿದೆ ಎಂಬುದರತ್ತ ಎಐ ಶೃಂಗದಲ್ಲಿ ಬ್ರಿಟನ್ ಗಮನಹರಿಸಲಿದೆ ಎಂದು ಬ್ರಿಟನ್ ಸರ್ಕಾರ ಹೇಳಿದೆ.

ದೆಹಲಿಯಲ್ಲಿ ಸೋಮವಾರದಿಂದ ಎಐ ಶೃಂಗಸಭೆ ಆರಂಭಗೊಂಡಿದ್ದು, ಉಪ ಪ್ರಧಾನಿ ಡೇವಿಡ್ ಲ್ಯಾಮಿ ಮತ್ತು ಎ.ಐ ಸಚಿವ ಕನಿಷ್ಕಾ ನಾರಾಯಣ್ ನೇತೃತ್ವದ ಬ್ರಿಟನ್ ನಿಯೋಗವು ಭಾಗಿಯಾಗಿದೆ. ಜಗತ್ತಿನ ಮೂಲೆಮೂಲೆಯ ಜನರ ಜೀವನವನ್ನು ಎಐ ಹೇಗೆ ಸುಧಾರಿಸಬಹುದು ಎಂಬ ಬಗ್ಗೆ ಚರ್ಚೆಗೆ ಚಿಂತನೆ ನಡೆಸಿದೆ.

ಶೃಂಗಕ್ಕೂ ಮುನ್ನ ಮಾತನಾಡಿದ ಲ್ಯಾಮಿ ಅವರು, ‘ಈ ಶೃಂಗಸಭೆಯು ಮಹತ್ವದ್ದಾಗಿದ್ದು, ಎ.ಐ ತಂತ್ರಜ್ಞಾನವನ್ನು ಸದುಪಯೋಗಿಸಿಕೊಂಡು, ಅಂತರರಾಷ್ಟ್ರೀಯ ಪಾಲುದಾರರೊಂದಿಗೆ ಹೇಗೆ ಕೆಲಸ ಮಾಡಬಹುದು ಎಂದು ತೀರ್ಮಾನಿಸಬಹುದಾಗಿದೆ’ ಎಂದರು.

ವಿಜ್ಞಾನ, ನಾವೀನ್ಯ ಮತ್ತು ತಂತ್ರಜ್ಞಾನ ಇಲಾಖೆಯು, ‘ಭಾರತ–ಬ್ರಿಟನ್ ಸ್ವಾಭಾವಿಕ ತಂತ್ರಜ್ಞಾನ ಪಾಲುದಾರ ರಾಷ್ಟ್ರಗಳು. ಇನ್ಫೊಸಿಸ್, ಟಾಟಾ ಕನ್ಸಲ್‌ಟೆನ್ಸಿ ಸರ್ವಿಸಸ್ ಮತ್ತು ವಿಪ್ರೊದಂತ ದೈತ್ಯ ಸಂಸ್ಥೆಗಳು ಬ್ರಿಟನ್‌ನಲ್ಲೂ ತಮ್ಮ ಕಬಂಧಬಾಹುವನ್ನು ಚಾಚಿವೆ’ ಎಂದು ಹೇಳಿದೆ.

Publication Date
17/02/2026

Presented by

## ❖ ಬಿಬಿಸಿ ವರ್ಷದ ಮಹಿಳಾ ಕ್ರೀಡಾಪಟು ಪ್ರಶಸ್ತಿಗೆ ಸ್ಮೃತಿ ಮಂದಾನ ಆಯ್ಕೆ

**ಸಂದರ್ಭ: ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರು ಬಿಬಿಸಿ ನೀಡುವ 2025ನೇ ಸಾಲಿನ 'ಭಾರತೀಯ ಮಹಿಳಾ ಕ್ರೀಡಾಪಟು' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.**

- ಫಿಡೆ ಮಹಿಳಾ ಚೆಸ್ ವಿಶ್ವಕಪ್ ವಿಜೇತ ದಿವ್ಯಾ ದೇಶಮುಖ್ ಅವರು ವರ್ಷದ ಉದಯೋನ್ಮುಖ ಆಟಗಾರ್ತಿ ಗೌರವಕ್ಕೆ ಭಾಜನರಾಗಿದ್ದಾರೆ.
- 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ನಲ್ಲಿ ಎರಡು ಕಂಚಿನ ಪದಕ ಜಯಿಸಿದ್ದ ಪ್ರೀತಿ ಪಾಲ್ ಅವರು ಪ್ಯಾರಾ ಮಹಿಳಾ ಅಥ್ಲೀಟ್ ಪ್ರಶಸ್ತಿ ಪಡೆದಿದ್ದಾರೆ. ಒಲಿಂಪಿಕ್ ಶೂಟಿಂಗ್‌ನಲ್ಲಿ ಫೈನಲ್ ತಲುಪಿದ್ದ ಭಾರತದ ಮೊದಲ ಮಹಿಳಾ ಶೂಟರ್ ಅಂಜಲಿ ಭಾಗವತ್ ಅವರು ಜೀವಮಾನ ಸಾಧನೆ ಗೌರವಕ್ಕೆ ಪಾತ್ರರಾಗಿದ್ದಾರೆ.
- ದಿಗ್ಗಜ ಟೆನಿಸ್ ಆಟಗಾರ ಲಿಯಾಂಡರ್ ಪೇಸ್, ಪ್ಯಾರಾಲಿಂಪಿಕ್ ಪದಕ ವಿಜೇತೆ ದೀಪಾ ಮಲಿಕ್ ಹಾಗೂ ಭಾರತ ಅಥ್ಲೆಟಿಕ್ ಫೆಡರೇಶನ್‌ನ ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ಅವರನ್ನೊಳಗೊಂಡ ತೀರ್ಪುಗಾರರ ಸಮಿತಿಯು ವಿಜೇತರನ್ನು ಆಯ್ಕೆ ಮಾಡಿದೆ.

Dr. Rajkumar IAS

## ❖ ಬಾಂಗ್ಲಾ ಪ್ರಧಾನಿಯಾಗಿ ತಾರಿಕ್ ಪ್ರಮಾಣ

**ಸಂದರ್ಭ: ಬಾಂಗ್ಲಾದೇಶದ ನ್ಯಾಷನಲಿಸ್ಟ್ ಪಾರ್ಟಿಯ (ಬಿಎನ್‌ಪಿ) ಮುಖ್ಯಸ್ಥ ತಾರಿಕ್ ರೆಹಮಾನ್ ಅವರು ದೇಶದ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಪ್ರಮಾಣವಚನ ಬೋಧಿಸಿದರು.**

- ಬಹಳ ವರ್ಷಗಳ ಸಂಪ್ರದಾಯ ಪ್ರಮಾಣವಚನ ಸ್ವೀಕಾರ ಸಮಾರಂಭವು ಅಧ್ಯಕ್ಷರ ಭವನದಲ್ಲಿ ನಡೆಯದೆ ಸಂಸತ್ತಿನ ಮುಂದಿನ ಬಯಲಲ್ಲಿ ನಡೆಯಿತು. ಇದಕ್ಕೂ ಮುನ್ನ ತಾರಿಕ್ ಅವರನ್ನು ಸಂಸದೀಯ ಪಕ್ಷದ ನಾಯಕನನ್ನಾಗಿ ಬಿಎನ್‌ಪಿ ಸಂಸದರು ಆಯ್ಕೆ ಮಾಡಿದರು. ತಾರಿಕ್ ಅವರೊಂದಿಗೆ 25 ಸಚಿವರು, 24 ರಾಜ್ಯ ಖಾತೆ ಸಚಿವರು ಮತ್ತು ಎಲ್ಲ ಸಂಸದರು ಪ್ರಮಾಣವಚನ ಸ್ವೀಕರಿಸಿದರು.

## ❖ ಇಂದಿನಿಂದ ಟಿಬೆಟಿಯನ್ನರ ಹೊಸ ವರ್ಷ

**ಸಂದರ್ಭ: ಟಿಬೆಟಿಯನ್ನರ ಹೊಸ ವರ್ಷ 'ಲೋಸಾರ್' 2153 ಬುಧವಾರದಿಂದ (ಫೆ.18) ಆರಂಭ ಆಗಲಿದೆ. 'ಫೈರ್ ಹಾರ್ಸ್' ಈ ವರ್ಷದ ರಾಶಿ.**

- ಪ್ರತಿಯೊಂದು ರಾಶಿಚಕ್ರವು **ಮರ, ಬೆಂಕಿ, ಭೂಮಿ, ಲೋಹ ಮತ್ತು ನೀರು** ಈ ಐದು ಅಂಶಗಳನ್ನು ಒಳಗೊಂಡಿರುತ್ತದೆ ಎಂದು ಟಿಬೆಟಿಯನ್ನರು ಹೇಳುತ್ತಾರೆ.
- **'ಫೈರ್ ಹಾರ್ಸ್' ಇದು ಚಲನೆ, ಧೈರ್ಯ ಮತ್ತು ರೂಪಾಂತರವನ್ನು** ಸಂಕೇತಿಸುತ್ತದೆ.
- ಲೋಸಾರ್ ಪ್ರಯುಕ್ತ ಈಗಾಗಲೇ ಟಿಬೆಟಿಯನ್ನರು ಮನೆ ಗಳನ್ನು ಶುಚಿಗೊಳಿಸಿ, ಸಿಹಿ ಖಾದ್ಯ ಹಾಗೂ **ನೂಡಲ್ ಸೂಪ್ ತಯಾರಿಕೆ** ಯಲ್ಲಿ ತೊಡಗಿದ್ದಾರೆ.
- ಮೊದಲ ಮೂರು ದಿನಗಳು ಹಬ್ಬದ ಪ್ರಮುಖ ದಿನಗಳು.
- **ಹುಣ್ಣಿಮೆಯ ದಿನ 'ಭೂತ ದಹನ'** ಮಾಡುವ ಮೂಲಕ ಬಿಕ್ಕು ಗಳು ಲೋಸಾರ್ ಆಚರಣೆಗೆ ತೆರೆ ಎಳೆಯು ತ್ತಾರೆ.




ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರು ಉತ್ತರಾಧಿಕಾರಿಯಾಗಿ ತಮ್ಮ ಹದಿಹರೆಯದ ಮಗಳನ್ನು ನೇಮಿಸಲು ಪ್ರಯತ್ನ ನಡೆಸುತ್ತಿದ್ದಾರೆ ಎನ್ನುವ ಮಾಹಿತಿ ಹೊರಬಿದ್ದಿದೆ. ಮುಂದಿನ ದಿನಗಳಲ್ಲಿ ಪಟ್ಟಕ್ಕಾಗಿ ಕಿಮ್ ಜಾಂಗ್ ಮಗಳು ಮತ್ತು ಅವರ ತಂಗಿ ಕಿಮ್ ಯೋ ಜಾಂಗ್ ನಡುವೆ ಪೈಪೋಟಿ, ಸಂಘರ್ಷ ಏರ್ಪಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇಬ್ಬರಲ್ಲಿ ಯಾರು ಗದ್ದುಗೆ ಏರಿದರೂ ಅವರು ದೇಶದ ಮೊದಲ ಮಹಿಳಾ ಮುಖ್ಯಸ್ಥರಾಗಲಿದ್ದಾರೆ

# ಸರ್ವಾಧಿಕಾರಿ ನಾಡಿನಲ್ಲಿ ಉತ್ತರಾಧಿಕಾರಿ ಕುತೂಹಲ



ಮಗಳು ಕಿಮ್ ಜು ಆಯ್ ಜೊತೆಗೆ ಕಿಮ್ ಜಾಂಗ್ ಉನ್

## ಕಿಮ್ ಜಾಂಗ್ ಉನ್ ಮಗಳು ಮತ್ತು ತಂಗಿ ನಡುವೆ ಶುರುವಾಗುವುದೇ ಸ್ಪರ್ಧೆ?

ಪ್ರಜಾವಾಣಿ ವಾರ್ತೆ

ಉತ್ತರ ಕೊರಿಯಾದಲ್ಲಿ ಇದೇ ತಿಂಗಳ ಅಂತ್ಯಕ್ಕೆ ಆಡಳಿತ ಪಕ್ಷದ (ವರ್ಕರ್ಸ್ ಪಾರ್ಟಿ) ಬೃಹತ್ ಸಮಾವೇಶ ನಡೆಯಲಿದೆ. ಐದು ವರ್ಷಗಳಿಗೊಮ್ಮೆ ನಡೆಯುವ ಸಮಾವೇಶದ ಬಗ್ಗೆ ಆ ದೇಶದ ಒಳಗೆ ಅಷ್ಟೇ ಅಲ್ಲ, ಜಾಗತಿಕ ಮಟ್ಟದಲ್ಲಿಯೂ ಕುತೂಹಲ ಮೂಡಿದೆ. ದೇಶವನ್ನು ಆಳುತ್ತಿರುವ ಕಿಮ್ ಜಾಂಗ್ ಉನ್ ಅವರ ಮುಂದಿನ ಆದ್ಯತೆಗಳು, ಸೇನೆ, ವಿದೇಶಾಂಗ ನೀತಿ, ಆರ್ಥಿಕತೆ, ಪ್ರಮುಖ ಅಧಿಕಾರಿಗಳ ಬದಲಾವಣೆ ಸೇರಿದಂತೆ ಹಲವು ಮಹತ್ವದ ವಿಚಾರಗಳ ಬಗ್ಗೆ ಅಂದು ಘೋಷಣೆಗಳು ಹೊರಬೀಳುವ ಸಾಧ್ಯತೆ ಇದೆ. ಅದಕ್ಕಿಂತ ಹೆಚ್ಚಿಗೆ ಅಂದು ಕಿಮ್ ಜಾಂಗ್ ಉನ್ ಅವರ ಉತ್ತರಾಧಿಕಾರಿ ಯಾರು ಎನ್ನುವ ಬಗ್ಗೆಯೂ ಘೋಷಣೆ ಹೊರಬೀಳಬಹುದು ಎನ್ನುವ ಕಾರಣಕ್ಕೆ ಅದರ ಬಗ್ಗೆ ಕುತೂಹಲ ಹುಟ್ಟಿಕೊಂಡಿದೆ.

ಇದುವರೆಗೆ ಕಿಮ್ ಜಾಂಗ್ ಉನ್ ಅವರ ಸಹೋದರಿ ಕಿಮ್ ಯೋ ಜಾಂಗ್ ಉತ್ತರಾಧಿಕಾರಿ ಆಗುತ್ತಾರೆ ಎಂದೇ ಭಾವಿಸಲಾಗಿತ್ತು. ಆದರೆ, ಇದೀಗ ಅವರ ಮಗಳು ಕಿಮ್ ಜು ಆಯ್ ಅವರ ಹೆಸರು ಮುನ್ನೆಲೆಗೆ ಬಂದಿದೆ. ಇದರಿಂದ ಮುಂದೆ ಸರ್ವಾಧಿಕಾರಿಯ ನಾಡಿನಲ್ಲಿ ಪಟ್ಟಕ್ಕಾಗಿ ಪೈಪೋಟಿ, ಸ್ಪರ್ಧೆ, ಸಂಘರ್ಷ ಉಂಟಾಗಲಿದೆ ಎನ್ನುವ ವಿಶ್ಲೇಷಣೆ ಇದೆ.

ಉತ್ತರ ಕೊರಿಯಾ ಉತ್ತರಾಧಿಕಾರಿ ವಿಚಾರವನ್ನು ಮುನ್ನೆಲೆಗೆ ತಂದಿದ್ದು ದಕ್ಷಿಣ ಕೊರಿಯಾ. ಸರ್ವಾಧಿಕಾರಿಯಾದ ಕಿಮ್ ಜಾಂಗ್ ಉನ್ ಅವರು ಉತ್ತರಾಧಿಕಾರಿಯಾಗಿ ತಮ್ಮ ಹದಿಹರೆಯದ ಮಗಳಾದ ಕಿಮ್ ಜು ಆಯ್ ಅನ್ನು ನೇಮಿಸಲು ಪ್ರಯತ್ನ ನಡೆಸುತ್ತಿದ್ದಾರೆ ಎಂದು ರಾಷ್ಟ್ರೀಯ ಗುಪ್ತಚರ ಸಂಸ್ಥೆಯ (ಎನ್ಐಎಸ್) ಮಾಹಿತಿ ಆಧರಿಸಿ ದಕ್ಷಿಣ ಕೊರಿಯಾ ಹೇಳಿದೆ.

ಕಿಮ್‌ಗೆ ಮೂವರು ಮಕ್ಕಳಿದ್ದು, ಅವರಲ್ಲಿ ಕಿಮ್ ಜು ಆಯ್ ಮಧ್ಯದವಳು (ಉಳಿದಿಬ್ಬರು ಗಂಡು ಮಕ್ಕಳು) ಎನ್ನಲಾಗಿದೆ. ಆದರೆ, ವಾಸ್ತವವಾಗಿ ಕಿಮ್ ಜಾಂಗ್ ಉನ್‌ಗೆ ಎಷ್ಟು ಮಕ್ಕಳು ಎನ್ನುವುದರ ಬಗ್ಗೆಯಾಗಲಿ, ಈಗ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿರುವ ಮಗಳ ಹೆಸರೇನು ಎನ್ನುವುದರ ಬಗ್ಗೆಯಾಗಲಿ ಅಧಿಕೃತ ಮಾಹಿತಿ ಇಲ್ಲ. ಅವಳ ಹೆಸರು ಕಿಮ್ ಜು ಆಯ್ ಇರಬಹುದು ಎನ್ನುವುದು ಒಂದು ಮೂಲದ ಮಾಹಿತಿ ಅಷ್ಟೇ. ಕಿಮ್ ಜಾಂಗ್ ಉನ್‌ಗೆ ಒಬ್ಬಳು ಮಗಳಿದ್ದಾಳೆ ಎನ್ನುವುದು ಬಹಿರಂಗಗೊಂಡಿದ್ದು 2013ರಲ್ಲಿ. ಉತ್ತರ ಕೊರಿಯಾ ರಾಜಧಾನಿ ಪ್ಯೊಗ್ಯಾಂಗ್‌ಗೆ ಭೇಟಿ ನೀಡಿದ್ದ ಅಮೆರಿಕದ ಬ್ಯಾಸ್ಕೆಟ್‌ಬಾಲ್ ಆಟಗಾರ ಡೆನ್ನಿಸ್ ರೋಡ್‌ಮನ್, ಕಿಮ್ ಜಾಂಗ್ ಉನ್‌ಗೆ ಒಬ್ಬ ಮಗಳಿದ್ದಾಳೆ ಎನ್ನುವುದನ್ನು ಬಹಿರಂಗಪಡಿಸಿದ್ದರು. 2022ರ ನಂತರ ಸೇನಾ ಕಾರ್ಯಕ್ರಮಗಳಲ್ಲಿ ಅಪ್ಪನ ಜತೆ ಕಾಣಿಸಿಕೊಂಡಿದ್ದಳು. ಕಳೆದ ವರ್ಷ ಸೇನಾ ಪರೇಡ್‌ನಲ್ಲಿ ಭಾಗವಹಿಸಲು ಚೀನಾಕ್ಕೆ ಭೇಟಿ ನೀಡಿದ್ದ ಅವಳು ಅಲ್ಲಿ ರಷ್ಯಾ ಸೇರಿದಂತೆ ವಿವಿಧ ರಾಷ್ಟ್ರಗಳ ಮುಖಂಡರನ್ನು ಭೇಟಿ ಮಾಡಿದ್ದು ಸುದ್ದಿಯಾಗಿತ್ತು. ಈ ವರ್ಷದ ಜನವರಿ 1ರಂದು ಮುತ್ತಾತ, ತಾತ ಅವರ ಸಮಾಧಿ ಇರುವ ಸ್ಥಳಕ್ಕೆ ಅಪ್ಪನೊಂದಿಗೆ ಭೇಟಿ ನೀಡಿದ್ದ ಬಾಲಕಿ, ಈಗ ಅಪ್ಪನೊಂದಿಗೆ ಸಾರ್ವಜನಿಕವಾಗಿ ಪದೇ ಪದೇ ಕಾಣಿಸಿಕೊಳ್ಳುತ್ತಿದ್ದಾಳೆ. ಸುಮಾರು 13 ವರ್ಷದ ಅವಳು ಆಡಳಿತದಲ್ಲಿ, ನೀತಿ ನಿರೂಪಣೆಯಲ್ಲಿ ಸಲಹೆ ನೀಡುತ್ತಿದ್ದು, ಅಪ್ಪನ ನಂತರ ಅಧಿಕಾರ ಹಿಡಿಯುತ್ತಾಳೆ ಎನ್ನಲಾಗುತ್ತಿದೆ.

ಕಿಮ್ ಜಾಂಗ್ ಉನ್, ಉತ್ತರ ಕೊರಿಯಾದ ವರ್ಕರ್ಸ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ, ಸೇನಾ ಪಡೆಗಳ ಸುಪ್ರೀಂ ಕಮಾಂಡರ್ ಮತ್ತು ದೇಶದ ಸರ್ವೋಚ್ಚ ನಾಯಕ. ರಕ್ತಸಿಕ್ತ ಹಾದಿಯಲ್ಲಿ 15 ವರ್ಷದ ಹಿಂದೆ ಗದ್ದುಗೆ ಹಿಡಿದ ಕಿಮ್ ಜಾಂಗ್ ಉನ್ ಅವರ ವಯಸ್ಸು ಈಗ 40ರ ಆಸುಪಾಸು ಇರಬಹುದು ಎನ್ನಲಾಗಿದೆ. ತನ್ನ ತಂದೆಯ ಸಾವಿನ ನಂತರ ಕಿಮ್ ಜಾಂಗ್ ಉನ್ ದೇಶದ ಅಧಿಕಾರದ ಚುಕ್ಕಾಣಿ ಹಿಡಿದಾಗ ಅವರ ವಯಸ್ಸು 26. ಯಾರನ್ನೂ ನಂಬದ, ಎಲ್ಲ ಕೆಲಸಗಳನ್ನೂ ನಿಗೂಢವಾಗಿ ಮಾಡುವ ಕಿಮ್ ಜಾಂಗ್ ಉನ್, ತನ್ನ ಹದಿಹರೆಯದ ಮಗಳನ್ನು ಉತ್ತರಾಧಿಕಾರಿಯನ್ನಾಗಿ ಈಗಲೇ ಏಕೆ ಸಜ್ಜು ಮಾಡುತ್ತಿದ್ದಾರೆ ಎನ್ನುವ ಬಗ್ಗೆಯೂ ಹಲವು ರೀತಿಯ ವಿಶ್ಲೇಷಣೆಗಳಿವೆ.

ಆದರೆ, ತನ್ನ ಮಗಳನ್ನು ಉತ್ತರಾಧಿಕಾರಿ ಯನ್ನಾಗಿ ಮಾಡುವುದು ಕಿಮ್ ಜಾಂಗ್ ಉನ್‌ಗೆ ಸುಲಭವೇನಲ್ಲ. ಕಿಮ್ ಜಾಂಗ್ ಉನ್ ಅವರ ತಂಗಿ ಕಿಮ್ ಯೋ ಜಂಗ್ ಉತ್ತರ ಕೊರಿಯಾದಲ್ಲಿ ಎರಡನೇ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾರೆ ಎನ್ನಲಾಗಿದೆ. ಅಣ್ಣನ ನಂತರ ತಾನೇ ಅಧಿಕಾರ ಹಿಡಿಯಬೇಕು ಎನ್ನುವ ಮಹತ್ವಾಕಾಂಕ್ಷೆ ಹೊಂದಿರುವ ಅವರು, ಹಿಂಸಾಚಾರದ ಮೂಲಕವಾದರೂ ಗದ್ದುಗೆ ಹಿಡಿಯಲು ಸಿದ್ಧರಾಗಿದ್ದಾರೆ ಎನ್ನಲಾಗುತ್ತಿದೆ. ಇಬ್ಬರಲ್ಲಿ ಯಾರು ದೇಶದ ಮುಖ್ಯಸ್ಥರಾದರೂ, ಅವರು ಉತ್ತರ ಕೊರಿಯಾದ ಮೊದಲ ಮಹಿಳಾ ಮುಖ್ಯಸ್ಥೆಯಾಗಲಿದ್ದಾರೆ. ಕಮ್ಯುನಿಸ್ಟ್ ಆಡಳಿತದ ರಾಷ್ಟ್ರಗಳಲ್ಲಿಯೂ ಅದೊಂದು ದಾಖಲೆಯಾಗಲಿದೆ. ಆದರೆ, ಸರ್ವಾಧಿಕಾರದ ರಾಷ್ಟ್ರಗಳಲ್ಲಿ ಇದು ಹೀಗೆಯೇ ನಡೆಯುತ್ತದೆ ಎಂದು ಯಾವುದರ ಬಗ್ಗೆಯೂ ಹೇಳಲಾಗದು.

**ಆಧಾರ:** ಎಎಫ್‌ಪಿ, ರಾಯಿಟರ್ಸ್, ಸಿಎನ್‌ಎನ್, ದಿ ಗಾರ್ಡಿಯನ್

### ಏಕಿಷ್ಟು ಕುತೂಹಲ?

ಅಣ್ವಸ್ತ್ರಗಳನ್ನು ಹೊಂದಿ, ಅಮೆರಿಕ ಸೇರಿದಂತೆ ಹಲವು ದೇಶಗಳಿಗೆ ಸಡ್ಡು ಹೊಡೆಯಲು ಬಯಸಿರುವ ಕಿಮ್ ಜಾಂಗ್ ಉನ್ ಉತ್ತರಾಧಿಕಾರದ ವಿಚಾರ ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಪ್ರಜಾಪ್ರಭುತ್ವದಲ್ಲಿ ಅಥವಾ ರಾಜಕೀಯ ವಿದ್ಯಮಾನಗಳು ಮುಕ್ತವಾಗಿ ನಡೆಯುವ ವ್ಯವಸ್ಥೆಯಲ್ಲಿ ಉತ್ತರಾಧಿಕಾರಿ ಆಯ್ಕೆ ಎನ್ನುವುದು ನಿಗೂಢ ವಿಚಾರವೇನಲ್ಲ. ಆದರೆ, ಉತ್ತರ ಕೊರಿಯಾದಂಥ ಮಾಹಿತಿ ನಿರ್ಬಂಧಿತ ವ್ಯವಸ್ಥೆಯಲ್ಲಿ, ದೇಶದ ಸಕಲ ಆಗುಹೋಗುಗಳನ್ನೂ ಒಬ್ಬ ವ್ಯಕ್ತಿ ಏಕಪಕ್ಷೀಯವಾಗಿ ನಿರ್ಧರಿಸುವಲ್ಲಿ, ಸರ್ವಾಧಿಕಾರಿಯ ಬದುಕಿನ ಸಣ್ಣಪುಟ್ಟ ವಿವರಗಳೂ ರಹಸ್ಯವಾಗಿರುವ ದೇಶದಲ್ಲಿ ಉತ್ತರಾಧಿಕಾರಿ ಆಯ್ಕೆ ಎನ್ನುವುದು ಭಾರಿ ಮಹತ್ವದ, ಕುತೂಹಲದ ವಿಚಾರವಾಗಿರುವುದು ಸಹಜವೇ ಆಗಿದೆ.




### ಅಣ್ಣನ ಹಾದಿಯಲ್ಲಿ ತಂಗಿ

38 ವರ್ಷದ ಕಿಮ್ ಯೋ ಜಾಂಗ್, ಉತ್ತರ ಕೊರಿಯಾದ ಆಡಳಿತದಲ್ಲಿ ಅಣ್ಣ ಕಿಮ್ ಜಾಂಗ್ ಉನ್ ನಂತರ, ಎರಡನೇ ಪ್ರಭಾವಿ ನಾಯಕಿ. ಅಲ್ಲಿನ ರಾಜಕೀಯ, ಸೇನೆ ಮತ್ತು ಅಧಿಕಾರಿಶಾಹಿಯಲ್ಲಿ ಬಿಗಿ ಹಿಡಿತವನ್ನು ಹೊಂದಿದ್ದಾರೆ. ಅಪಾಯಕಾರಿ ಆಡಳಿತಗಾರ್ತಿ ಎಂಬ ಕುಖ್ಯಾತಿಯೂ ಜಾಗತಿಕವಾಗಿ ಇದೆ. ದಕ್ಷಿಣ ಕೊರಿಯಾ, ಅಮೆರಿಕ ಸೇರಿದಂತೆ ಉತ್ತರ ಕೊರಿಯಾದ ಆಡಳಿತ, ನಿಲುವನ್ನು ವಿರೋಧಿಸುತ್ತಿರುವ ರಾಷ್ಟ್ರಗಳ ಮುಖಂಡರನ್ನು ನಿರ್ಭಿಡೆಯಿಂದ ಟೀಕಿಸುತ್ತಾ ಬಂದಿರುವ ಕಿಮ್ ಯೋ ಅವರನ್ನು ಅಮೆರಿಕದ ಖಜಾನೆ ಇಲಾಖೆ 2017ರ ಜನವರಿಯಲ್ಲಿ ಕಪ್ಪು ಪಟ್ಟಿಗೆ ಸೇರಿಸಿತ್ತು.

ಸದ್ಯ ಈಕೆ ಅಣ್ಣನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. 2011ರಲ್ಲಿ ತಂದೆ ಕಿಮ್ ಜಾಂಗ್ ಇಲ್ ನಿಧನರಾದಾಗ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಕಿಮ್ ಯೋ ಜಾಂಗ್, ನಂತರ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು 2014ರಲ್ಲಿ. ಆ ವರ್ಷ ಕಿಮ್ ಜಾಂಗ್ ಉನ್ ಅವರು ಅನಾರೋಗ್ಯಕ್ಕೆ ಒಳಗಾಗಿದ್ದ ವೇಳೆ ದೇಶದ ಆಡಳಿತ ನಿರ್ವಹಿಸಿದವರೂ ಇವರೇ. 2017ರಲ್ಲಿ ಇವರನ್ನು ವರ್ಕರ್ಸ್ ಪಾರ್ಟಿಯ ಮುಖ್ಯ ಹುದ್ದೆಗೆ ಕಿಮ್ ಜಾಂಗ್ ನೇಮಕ ಮಾಡಿದ್ದರು. ಆ ಬಳಿಕ ದೇಶದ ಆಡಳಿತದಲ್ಲಿ ಕಿಮ್ ಯೋ ಇನ್ನಷ್ಟು ಪ್ರಭಾವಿಯಾಗಿದ್ದಾರೆ.

ದೇಶದ ರಾಜಕೀಯ, ಸೇನಾ ವಲಯದಲ್ಲಿ ಇವರಿಗೆ ಅಪಾರ ಬೆಂಬಲಿಗರಿದ್ದಾರೆ ಎಂದೂ ಹೇಳಲಾಗುತ್ತಿದೆ. ಅಣ್ಣ ಇರುವಾಗಲೇ ಆಡಳಿತದ ಮೇಲೆ ಹಿಡಿತ ಹೊಂದಿರುವ ಕಿಮ್ ಯೋ ಜಾಂಗ್ ಅವರು, ದೇಶದ ಚುಕ್ಕಾಣಿ ಹಿಡಿಯುವ ಯಾವುದೇ ಅವಕಾಶವನ್ನು ಕೈಚೆಲ್ಲಲಾರರು ಎಂಬುದು ರಾಜತಾಂತ್ರಿಕ ತಜ್ಞರ ಅಭಿಪ್ರಾಯ.



ಕಿಮ್ ಯೋ ಜಾಂಗ್

### ಅಧಿಕಾರ ಹಸ್ತಾಂತರ ಸುಲಭವಲ್ಲ

ಉತ್ತರ ಕೊರಿಯಾದಲ್ಲಿ ಉತ್ತರಾಧಿಕಾರಿ ನೇಮಕ, ಅಧಿಕಾರ ಹಸ್ತಾಂತರ ಅಷ್ಟು ಸುಲಭವಾಗಿ ನಡೆಯದು. 2011ರಲ್ಲಿ ತಂದೆ ಮೃತಪಟ್ಟ ನಂತರ ಕಿಮ್ ಜಾಂಗ್ ಉನ್ ಅಧಿಕಾರ ಚುಕ್ಕಾಣಿ ಹಿಡಿಯುವಾಗಲೂ ಅವರ ಕುಟುಂಬದಲ್ಲಿ ನಾಟಕೀಯ ಬೆಳವಣಿಗೆಗಳು ನಡೆದಿದ್ದವು.

ಅಧಿಕಾರಕ್ಕೆ ಏರಿದ ಎರಡು ವರ್ಷಗಳ ನಂತರ ತಮ್ಮ ಚಿಕ್ಕಪ್ಪ ಜಾಂಗ್ ಸಾಂಗ್ ಥೇಯಿಕ್ ಅವರನ್ನು ಪಕ್ಷ ವಿರೋಧಿ, ಪಕ್ಷ ವಿಭಜನೆ ಯತ್ನ, ಭ್ರಷ್ಟಾಚಾರ ಆರೋಪದಲ್ಲಿ ಬಂಧಿಸಿದ್ದರು. 2013ರ ಡಿಸೆಂಬರ್ 12ರಂದು ಅವರಿಗೆ ಮರಣದಂಡನೆಯನ್ನೂ ವಿಧಿಸಲಾಗಿತ್ತು.

2017ರ ಫೆಬ್ರುವರಿಯಲ್ಲಿ ಕಿಮ್ ಜಾಂಗ್ ಉನ್ ಅವರ ಮಲಸಹೋದರ ಕಿಮ್ ಜಾಂಗ್ ನಾಮ್ ಅವರನ್ನು ಕ್ವಾಲಾಲಂಪುರದ ವಿಮಾನ ನಿಲ್ದಾಣದಲ್ಲಿ ಹತ್ಯೆ ಮಾಡಲಾಗಿತ್ತು. ಇಬ್ಬರು ಅಪರಿಚಿತರು ಅವರ ಮುಖಕ್ಕೆ ರಾಸಾಯನಿಕವನ್ನು ಎರಚಿದ್ದರು. ಈ ಹತ್ಯೆಯ ಹಿಂದೆ ಕಿಮ್ ಜಾಂಗ್ ಅವರ ಕೈವಾಡ ಇದೆ ಎಂದೂ ಹೇಳಲಾಗಿತ್ತು.

ಕಿಮ್ ಜಾಂಗ್ ಉನ್ ಇರುವವರೆಗೆ ಅಧಿಕಾರ ಹಸ್ತಾಂತರದ ಪ್ರಮೇಯ ಬರಲಾರದು. ಅವರ ನಿಧನದ ನಂತರ ಅಧಿಕಾರ ಯಾರು ಹಿಡಿಯಬೇಕು ಎಂಬ ಬಗ್ಗೆ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಬರಬಹುದು ಎಂದೂ ಹೇಳಲಾಗುತ್ತಿದೆ. ಸದ್ಯ ಜಗತ್ತಿಗೆ ಕಿಮ್ ಜಾಂಗ್ ಅವರ ಮಗಳ ಬಗ್ಗೆ ಮಾತ್ರ ಗೊತ್ತಿದೆ. ಅವರಿಗೆ ಇನ್ನಿಬ್ಬರು ಮಕ್ಕಳು ಇದ್ದಾರೆ ಎಂದು ಹೇಳಲಾಗುತ್ತಿರುವುದರಿಂದ ಕೊನೆ ಕ್ಷಣದಲ್ಲಿ ಅಥವಾ ಸಂದರ್ಭ ಬಂದರೆ ಉಳಿದ ಮಕ್ಕಳಲ್ಲಿ ಒಬ್ಬರನ್ನು ಉತ್ತರಾಧಿಕಾರಿ ಎಂದು ಅವರು ಘೋಷಿಸಬಹುದು ಎನ್ನುವ ವಾದವೂ ಇದೆ.

Publication Date
18/02/2026

## ❖ 'ಗ್ರೇಟ್ ನಿಕೋಬಾರ್'ಗೆ ಎನ್‌ಜಿಟಿ ಅನುಮತಿ

**ಸಂದರ್ಭ: ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಅಂತರ ರಾಷ್ಟ್ರೀಯ ಕಂಟೇನರ್ ಟ್ರಾನ್ಸ್ ಶಿಪ್‌ಮೆಂಟ್ ಟರ್ಮಿನಲ್ ನಿರ್ಮಾಣದ ಪ್ರಸ್ತಾವಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಅನುಮತಿ ನೀಡಿದೆ. ಪರಿಸರ ಅನುಮತಿ (ಇಸಿ) ಕೊಡುವ ಮುನ್ನ ಸುರಕ್ಷತಾ ಕ್ರಮಗಳಿಗೂ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದೆ.**

- ಪ್ರಸ್ತಾವಿತ ಟರ್ಮಿನಲ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಆಕ್ಷೇಪಣೆ ಕುರಿತಾದ ಅರ್ಜಿ ವಿಚಾರಣೆ ನಡೆಸಿ ಕೋಲ್ಕತ್ತದಲ್ಲಿರುವ ಪೂರ್ವ ವಲಯದ ಪೀಠದ ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾತ್ಸವ ಅವರು ಈ ಆದೇಶ ಯೋಜನೆಯು ಹೊರಡಿಸಿದ್ದಾರೆ. ಟೌನ್‌ಶಿಪ್ ಹಾಗೂ 450 ಮೆಗಾವಾಟ್ ಅನಿಲ ಹಾಗೂ ಸೌರ ಅಧಾರಿತ ವಿದ್ಯುತ್ ಘಟಕವನ್ನು ಒಳಗೊಂಡಿರಲಿದೆ.
- ಟರ್ಮಿನಲ್ ನಿರ್ಮಾಣದಿಂದ ದ್ವೀಪ ಕರಾವಳಿ ವಲಯ ಅಧಿಸೂಚನೆ (ಐಸಿಆರ್‌ಝ್) ಉಲ್ಲಂಘನೆಯಾಗಲಿದೆ ಎಂದು ಆರೋಪಿಸಿ ಇದಕ್ಕೂ ಮುನ್ನ ಹಲವು ಅರ್ಜಿಗಳು ಸಲ್ಲಿಕೆಯಾಗಿ-ದ್ದವು. ಇದು ಯೋಜನೆಗೆ ಸಂಬಂಧಿಸಿದ ಎರಡನೇ ಹಂತದ ಮೊಕದ್ದಮೆ ಯಾಗಿತ್ತು. **2023ರ ಏಪ್ರಿಲ್‌ನಲ್ಲಿ ಯೋಜನೆಗೆ ಪರಿಸರ ಅನುಮತಿಯನ್ನು ಎನ್‌ಜಿಟಿ ಎತ್ತಿ ಹಿಡಿದಿತ್ತು.** ಅರ್ಜಿದಾರರು ಎತ್ತಿದ್ದ ನಿರ್ದಿಷ್ಟ ಕಾಳಜಿಯ ಕುರಿತು ಪರಿಶೀಲನೆ ನಡೆಸಲು ಉನ್ನತ ಮಟ್ಟದ ಸಮಿತಿ (ಎಚ್‌ಪಿಸಿ)ಯನ್ನೂ ರಚಿಸಿತ್ತು.
- 'ಪರಿಸರ ಅನುಮತಿಗೆ ಸಂಬಂಧಿಸಿ ಷರತ್ತುಗಳನ್ನು ವಿಧಿಸುವ ಮೂಲಕ ಹೆಚ್ಚುವರಿ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಮೊದಲ ಸುತ್ತಿನ 'ಕಾರ್ಯತಂತ್ರದ ಮೊಕದ್ದಮೆಯ ವಿಚಾರಣೆಯಲ್ಲಿ ಪರಿಸರ ಅನುಮತಿಗೆ ಸಂಬಂಧಿಸಿದ ಮಧ್ಯಪ್ರವೇ, ಶಿಸಲು ನ್ಯಾಯಮಂಡಳಿ ನಿರಾಕರಿಸಿತ್ತು. ಅರ್ಜಿಯಲ್ಲಿ ಎತ್ತಿರುವ ಉಳಿದ ಸಮಸ್ಯೆ ಗಳನ್ನು ಬಗೆಹರಿಸಲಾಗಿದೆ. ಯೋಜನೆ ಜಾರಿಯಾಗುವುದು ಪ್ರಮುಖ' ಎಂದು ಉನ್ನತ ಮಟ್ಟದ ಸಮಿತಿ (ಎಚ್ಪಿಸಿ) ಕೂಡ ಪರಿಗಣಿಸಿದ್ದು, ಈ ವಿಚಾರದಲ್ಲಿ ಮಧ್ಯಪ್ರವೇಶಿಸು ವುದು ನಮಗೆ ಯಾವುದೇ ಉತ್ತಮ ವಾದ ಆಧಾರಗಳು ಸಿಗುವುದಿಲ್ಲ' ಎಂದು ನ್ಯಾಯಮಂಡಳಿ ತಿಳಿಸಿದೆ.
- ಇದರ ಹೊರತಾಗಿಯೂ, 'ಸಂಬಂಧಿತ ಪ್ರಾಧಿಕಾರಗಳು ಪರಿಸರ ಅನುಮತಿಗೆ ಸಂಬಂಧಿಸಿದ ಷರತ್ತುಗಳನ್ನು ಕಠಿಣವಾಗಿ ಜಾರಿಗೊಳಿಸುವಂತೆ ನೋಡಿಕೊಳ್ಳಬೇಕು' ಎಂದು ನ್ಯಾಯಮಂಡಳಿಯು ಒತ್ತಿ ಹೇಳಿದೆ.
- ಯೋಜನೆಯೂ ಜಾರಿಗೊಳ್ಳುವುದು ಯೋಜನೆಯನ್ನು ನಿರಾಕರಿಸಲು ಅತ್ಯಗತ್ಯವಾಗಿರುವ ಸಾಧ್ಯವಿಲ್ಲ. **ಐಸಿಆರ್‌ಝಡ್ ಅಧಿ ಸೂಚನೆಯನ್ನು** ನಿರ್ಲಕ್ಷಿಸಲಾಗುವುದಿಲ್ಲ' 'ಕಾರ್ಯತಂತ್ರದ ಭಾಗವಾಗಿ ಕಾರಣ, ಎಂದು ಸ್ಪಷ್ಟಪಡಿಸಿದೆ.
- **ಪರಿಸರ ಅನುಮತಿಯಲ್ಲಿ ವಿಧಿಸಿದ ನಿರ್ದಿಷ್ಟ ಕಠಿಣ ಷರತ್ತುಗಳು:** ಸಮುದ್ರ ಆಮೆಗಳ ರಕ್ಷಣೆ. ನಿಕೋಬಾರ್ ಹಾಗೂ ಮೆಗಾಪೊಡ್ ಹಕ್ಕಿಗಳ ರಕ್ಷಣೆ, ಉಪ್ಪು ನೀರಿನ ಮೊಸಳೆ, ಸ್ಥಳೀಯ ಸಸ್ಯವರ್ಗಗಳ ರಕ್ಷಣೆ, ನಿಕೋಬಾರ್ ಉದ್ದ ಬಾಲದ ಮಂಗಗಳು, ನಿಕೋಬಾರ್ ಏಡಿಗಳು, ನಿಕೋಬಾರ್ ದ್ವೀಪದ ಸ್ಥಳೀಯ ಹಕ್ಕಿಗಳು. ಮ್ಯಾಂಗ್ರೋವ್ ಕಾಡುಗಳ ಪುನರ್ ಸ್ಥಾಪನೆ, ಹವಳದ ಸ್ಥಳಾಂತರ, ಶೋಂಪನ್ ನಿಕೋಬಾರಿ ದ್ವೀಪಗಳ ಬುಡಕಟ್ಟು ಸಮುದಾಯದವರ ಕಲ್ಯಾಣ ಕಾರ್ಯಕ್ರಮಗಳಿಗೆ ಆದ್ಯತೆ. ದ್ವೀಪದ ಕರಾವಳಿ ರಕ್ಷಣೆ, ಆಮೆ ಹಾಗೂ ಹಕ್ಕಿಗಳ ಗೂಡು. ಮೊಟ್ಟೆಗಳ ರಕ್ಷಣೆ ನಿಟ್ಟಿನಲ್ಲಿ ಮರಳಿನ ಕಡಲ ತೀರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

## ❖ ಇನ್ಫಿ-ಆ್ಯಂಥ್ರೋಪಿಕ್ ಪಾಲುದಾರಿಕೆ

**ಸಂದರ್ಭ: ಬೃಹತ್ ಕಂಪನಿಗಳಿಗೆ ಎ.ಐ ಉಪಕರಣ ಅಭಿವೃದ್ಧಿ ಮಾಡಿಕೊಡುವ ಉದ್ದೇಶ ದೇಶದ ಐ.ಟಿ ಸೇವಾ ವಲಯದ ಎರಡನೆಯ ಅತಿದೊಡ್ಡ ಕಂಪನಿಯಾದ ಇನ್ಫೋಸಿಸ್, ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ದೊಡ್ಡ ಹೆಸರು ಸಂಪಾದಿಸಿರುವ ಅಮೆರಿಕದ ಆ್ಯಂಥ್ರೋಪಿಕ್ ಕಂಪನಿಯ ಜೊತೆ ಪಾಲುದಾರಿಕೆ ಮಾಡಿಕೊಳ್ಳುತ್ತಿರು ವುದಾಗಿ ಮಂಗಳವಾರ ಘೋಷಿಸಿದೆ.**

- ಬೃಹತ್ ಪ್ರಮಾಣದ ಕಂಪನಿ, ಸಂಸ್ಥೆಗಳ ಬಳಕೆಗೆ ಅಗತ್ಯವಿರುವ ಎ.ಐ. ಉಪಕರಣಗಳನ್ನು ಅಭಿವೃದ್ಧಿಪಡಿಸು ವುದು ಹಾಗೂ ಆ ಉಪಕರಣ ಅಳವಡಿಕೆ ಮಾಡಿಕೊಡುವುದು ಈ ಪಾಲುದಾರಿಕೆಯ ಒಂದು ಭಾಗ.
- **ದೂರಸಂಪರ್ಕ, ಹಣಕಾಸು ಸೇವೆಗಳು, ತಯಾರಿಕೆ ಮತ್ತು ತಂತ್ರಾಂಶ ಅಭಿವೃದ್ಧಿ ವಲಯದ ಕಂಪನಿಗಳನ್ನು** ಗುರಿಯಾಗಿ ಇರಿಸಿಕೊಂಡು ಇನ್ಫೋಸಿಸ್ ಮತ್ತು ಆ್ಯಂಥ್ರೋಪಿಕ್ ಈ ಸೇವೆಗಳನ್ನು ನೀಡುವ ಉದ್ದೇಶ ಹೊಂದಿವೆ.
- ಪಾಲುದಾರಿಕೆಯ ದೂರಸಂಪರ್ಕ ಭಾಗವಾಗಿ ವಲಯಕ್ಕೆ ಸಂಬಂಧಿಸಿದ 'ಆ್ಯಂಥ್ರೋಪಿಕ್ ಶ್ರೇಷ್ಠತಾ ಕೇಂದ್ರ'ವನ್ನು ಆರಂಭಿಸಲಾಗುತ್ತದೆ. ಇದು ಬಹುಹಂತಗಳ ಕೆಲಸಗಳನ್ನು ನಿರ್ವಹಿಸಬಲ್ಲ ಹಾಗೂ ತಾನಾಗಿಯೇ ತೀರ್ಮಾನಗಳನ್ನು ತೆಗೆದುಕೊಳ್ಳಬಲ್ಲ 'ಎ.ಐ ಏಜೆಂಟ್'ಗಳನ್ನು ರೂಪಿಸಿ.
- ಅವುಗಳನ್ನು ಅಳವಡಿಕೆ ಮಾಡುವ ಕೆಲಸ ನಿರ್ವಹಿಸಲಿದೆ. ನಂತರದ ದಿನಗಳಲ್ಲಿ ಈ ಬಗೆಯ ಏಜೆಂಟ್ ಗಳನ್ನು ಇತರ ಉದ್ಯಮ ವಲಯಗಳಿಗೂ ವಿಸ್ತರಿಸಬಹುದು ಎಂದು ಇನ್ಫೋಸಿಸ್‌ನ ಪ್ರಕಟಣೆ ತಿಳಿಸಿದೆ.
- ಪಾಲುದಾರಿಕೆಯ ಭಾಗವಾಗಿ ಆ್ಯಂಥ್ರೋಪಿಕ್‌ನ ಕ್ಲಾಡ್ ಮಾದರಿಗಳನ್ನು ಇನ್ಫೋಸಿಸ್‌ನ ಟೊಪಾಜ್ ಜೊತೆ ಸಂಯೋಜಿಸಲಾಗುತ್ತದೆ.
- ಬಹು ಹಂತಗಳನ್ನು ಒಳಗೊಂಡ ಕೆಲಸಗಳನ್ನು ಸ್ವತಂತ್ರವಾಗಿ ನಿಭಾಯಿಸಬಲ್ಲ ವ್ಯವಸ್ಥೆಗಳ ಮೇಲೆ ಪ್ರಮುಖ ಗಮನ ನೀಡಲಾಗುತ್ತದೆ. ವಿವಿಧ ಉದ್ಯಮಗಳ ಅಗತ್ಯಕ್ಕೆ ಅನುಗುಣವಾದ ಎ.ಐ ಏಜೆಂಟ್‌ಗಳನ್ನು ಅಭಿವೃದ್ಧಿಪಡಿಸಲು ಕೂಡ ಗಮನ ನೀಡಲಾಗುತ್ತದೆ.
- 'ಪ್ರಾತ್ಯಕ್ಷಿಕೆಯ ಹಂತದಲ್ಲಿ ಕೆಲಸ ಮಾಡುವ ಎ.ಐ ಮಾದರಿ ಹಾಗೂ ಉದ್ಯಮದಲ್ಲಿ ಕೆಲಸ ಮಾಡುವ ಎ.ಐ. ಮಾದರಿ ನಡುವೆ ದೊಡ್ಡ ಅಂತರ ಇದೆ. ಈ ಅಂತರವನ್ನು ತಗ್ಗಿಸಲು ವಿಷಯ ಪರಿಣತಿ ಬೇಕು. ದೂರಸಂಪರ್ಕ, ಹಣಕಾಸು ಸೇವೆಗಳು, ತಯಾರಿಕಾ ವಲಯಕ್ಕೆ ಸಂಬಂಧಿಸಿದ ಅಂತಹ ಪರಿಣತಿಯು ಇನ್ಫೋಸಿಸ್ ಬಳಿ ಇದೆ' ಎಂದು ಆ್ಯಂಥ್ರೋಪಿಕ್ ಕಂಪನಿಯ ಸಿಇಒ ಡೇರಿಯೊ ಅಮೊಡೈ ಹೇಳಿದ್ದಾರೆ.

## ❖ ಹೋರ್ಮುಜ್: ಕ್ಷಿಪಣಿ ಹಾರಿಸಿದ ಇರಾನ್

**ಸಂದರ್ಭ: ಪರಮಾಣು ಕಾರ್ಯಕ್ರಮಗಳ ಜಿನೇವಾದಲ್ಲಿ ಇರಾನ್ ಹಾಗೂ ಅಮೆರಿಕ ನಡುವೆ ಎರಡನೇ ಸುತ್ತಿನ ಮಾತುಕತೆ ನಡೆಯುತ್ತಿರುವಂತೆಯೇ, ಮಧ್ಯಪ್ರಾಚ್ಯದಲ್ಲಿ ಅಮೆರಿಕ ತನ್ನ ಸೇನಾ ನಿಯೋಜನೆಯನ್ನು ಹೆಚ್ಚು ಮಾಡಿದ್ದು, ಇರಾನ್ ಕೂಡ ನೌಕಾಪಡೆಯ ಕಸರತ್ತು ಮುಂದುವರಿಸಿದೆ.**

- ಮಾತುಕತೆ ಆರಂಭಗೊಂಡಿರುವಂತೆಯೇ, ಹೋರ್ಮುಜ್ ಜಲಸಂಧಿಯ ಕಡೆಗೆ ಇರಾನ್ ಕ್ಷಿಪಣಿಗಳನ್ನು ಹಾರಿಸಿವೆ ಎಂದು ಇರಾನ್‌ನ ಮಾಧ್ಯಮ ವರದಿ ಮಾಡಿವೆ.
- **ಜಗತ್ತಿಗೆ ಪೂರೈಕೆಯಾಗುವ ಕಚ್ಚಾತೈಲದ ಶೇಕಡಾ 20ರಷ್ಟು ಇದೇ ಜಲಸಂಧಿಯ ಮೂಲಕ ಸಾಗುತ್ತದೆ**. ಇದೇ ಜಾಗದಲ್ಲಿ ನೌಕಾಪಡೆಯ ಕಸರತ್ತು ಆರಂಭಿಸುವುದಾಗಿ ಇರಾನ್ ತಿಳಿಸಿತ್ತು.
- 'ಇರಾನ್ ಒಳಗೆ ಹಾಗೂ ಹೋರ್ಮುಜ್ ಜಲಸಂಧಿಯ ಕರಾವಳಿ ತಟದಲ್ಲಿರುವ ಗುರಿಗಳ ಮೇಲೆ ಕ್ಷಿಪಣಿ ದಾಳಿ ನಡೆಸಲಾಯಿತು' ಎಂದು ಇಲ್ಲಿನ 'ತಂ' ಸುದ್ದಿಸಂಸ್ಥೆವರದಿ ಮಾಡಿದೆ.
- 'ಪರಮಾಣು ಕಾರ್ಯಕ್ರಮದ ಕುರಿತು ಅಮೆರಿಕದ ಜೊತೆಗೆ ಮಾತುಕತೆ ನಡೆಯುತ್ತಿದೆ. ದೇಶದೊಳಗಿನ ನೀತಿಯ ಕುರಿತಂತೆ ಮಾತುಕತೆಯೂ ಒಳಗೊಂಡಿಲ್ಲ' ಎಂದು ಇರಾನ್‌ನ ಸರ್ಕಾರಿ ಸುದ್ದಿವಾಹಿನಿ ವರದಿ ಮಾಡಿದೆ.

## ❖ ಭಾರತ-ಅಮೆರಿಕ ಮಧ್ಯೆ ಕೇಬಲ್

**ಸಂದರ್ಭ: ಎ.ಐ. (ಕೃತಕ ಬುದ್ಧಿಮತ್ತೆ) ಸಂಪರ್ಕವನ್ನು ಬಲಪಡಿಸುವ ಉದ್ದೇಶದಿಂದ ಭಾರತ ಮತ್ತು ಅಮೆರಿಕದ ನಡುವೆ ಸಮುದ್ರದ ಅಡಿಯಲ್ಲಿ ಹೊಸ ಕೇಬಲ್ ಜಾಲ ಅಳವಡಿಕೆ ಮಾಡುವುದಾಗಿ ಗೂಗಲ್ ಕಂಪನಿಯ ಸಿಇಒ ಸುಂದರ್ ಪಿಚೈ ಪ್ರಕಟಿಸಿದ್ದಾರೆ.**

- ಗೂಗಲ್ ಕಂಪನಿಯು ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಿದ್ದು, 10 ಸಾವಿರಕ್ಕೂ ಹೆಚ್ಚಿನ ಶಾಲೆಗಳ 1.1 ಕೋಟಿ ಮಕ್ಕಳಿಗೆ ಎ.ಐ. ನೆರವು ಒದಗಿಸಲಿದೆ. ತರಗತಿಗಳಲ್ಲಿ ರೊಬೋಟಿಕ್ಸ್ ಮತ್ತು ಕೋಡಿಂಗ್ ಬಗ್ಗೆ ಮಾಹಿತಿ ನೀಡಲಿದೆ.
- ಭಾರತ ಮತ್ತು ಅಮೆರಿಕ ನಡುವಿನ ಹೊಸ ಕೇಬಲ್ ಜಾಲವು ಈ ಎರಡು ದೇಶಗಳ ನಡುವೆ ಎ.ಐ ಸಂಪರ್ಕ ಹೆಚ್ಚಿಸುವುದಲ್ಲದೆ, ದಕ್ಷಿಣಾರ್ಧಗೋಳದ ಹಲವು ದೇಶಗಳ ನಡುವೆ ಸಂಪರ್ಕ ಬಲಪಡಿಸುವ ಕೆಲಸವನ್ನೂ ಮಾಡಲಿದೆ.
- ಪಿಚೈ ಅವರು 'ಎ.ಐ ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಭಾಗಿ ಯಾಗಲು ಇಲ್ಲಿಗೆ ಬಂದಿದ್ದಾರೆ. ಈಚೆಗೆ ಘೋಷಿಸಲಾಗಿರುವ, ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ತಲೆ ಎತ್ತಲಿರುವ ಎ.ಐ ಕೇಂದ್ರವು ಒಂದು ಗಿಗಾವಾಟ್‌ಗಿಂತ ಹೆಚ್ಚಿನ ಸಾಮರ್ಥ್ಯ ಹೊಂದಿರಲಿದೆ ಎಂದು ಹೇಳಿದ್ದಾರೆ. ಈ ಎ.ಐ. ಕೇಂದ್ರಕ್ಕಾಗಿ ಗೂಗಲ್ ಕಂಪನಿಯು ಅಂದಾಜು ₹1.36 ಲಕ್ಷ ಕೋಟಿ ವೆಚ್ಚ ಮಾಡುತ್ತಿದೆ. ಇದರ ನಿರ್ಮಾಣ ಪೂರ್ಣಗೊಂಡ ನಂತರದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ, ಅತ್ಯಾಧುನಿಕ ಎ.ಐ ಸೌಲಭ್ಯಗಳು ದೇಶದ ಎಲ್ಲೆಡೆ ಜನರಿಗೆ ಮತ್ತು ಉದ್ದಿಮೆಗಳಿಗೆ ಲಭ್ಯವಾಗಲಿವೆ ಎಂದು ಪಿಚೈ ಹೇಳಿದ್ದಾರೆ.

## ❖ ಮುಸ್ಲಿಂ ಮೀಸಲು ರದ್ದು

**ಸಂದರ್ಭ: ಉದ್ಯೋಗ ಮತ್ತು ಶಿಕ್ಷಣದಲ್ಲಿ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಶೇ 5ರಷ್ಟು ಮೀಸಲಾತಿಯನ್ನು ಮಹಾರಾಷ್ಟ್ರ ಸರ್ಕಾರ ರದ್ದುಗೊಳಿಸಿದೆ.**

- ಮುಸ್ಲಿಂ ಸಮುದಾಯಕ್ಕೆ ಶೇ 5ರಷ್ಟು ಮೀಸಲಾತಿ ನೀಡುವ ಸುಗ್ರೀವಾಜ್ಞೆಗೆ ನ್ಯಾಯಾಲಯಮಧ್ಯಂತರ ತಡೆ ನೀಡಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರ ತಿಳಿಸಿದೆ. ಈ ಹಿಂದಿನ ಕಾಂಗ್ರೆಸ್-ಎನ್ ಸಿಪಿ ಸರ್ಕಾರವು ಮರಾಠಿಗರಿಗೆ ಶೇ 16ರಷ್ಟು, ಮುಸ್ಲಿಮರಿಗೆ ಶೇ 5ರಷ್ಟು ಮೀಸಲಾತಿ ನೀಡಿ ಸುಗ್ರೀವಾಜ್ಞೆ ಹೊರಡಿಸಿತ್ತು.

## ❖ ರಣಹದ್ದು ಬಳಗಕ್ಕೆ ಹೊಸ ಅತಿಥಿ

**ಸಂದರ್ಭ: ಇಲ್ಲಿನ ರಾಮದೇವರ ಬೆಟ್ಟದಲ್ಲಿರುವ, ಅಳಿವಿನಂಚಿನ ರಣಹದ್ದು ಬಳಗಕ್ಕೆ ಹೊಸ ಅತಿಥಿ ಸೇರಿದೆ. ಉದ್ದ ಕೊಕ್ಕಿನ ರಣಹದ್ದು ಸತತ ಐದನೇ ವರ್ಷ, ಹೊಸ ಮರಿಯೊಂದಿಗೆ ಕಾಣಿಸಿಕೊಂಡಿದೆ.**

- 2015ರ ಮೊದಲ ಬಾರಿಗೆ ರಣಹದ್ದು ಮೊಟ್ಟೆ ಇಟ್ಟು, ಮರಿ ಮಾಡಿದ್ದು ದಾಖಲಾಗಿತ್ತು. ನಂತರ ಪ್ರತಿ ವರ್ಷ ಮೊಟ್ಟೆ ಇಟ್ಟರೂ ಮರಿ ಹೊರಬಂದಿರಲಿಲ್ಲ. ಬಳಿಕ 2021ರಿಂದ ಸತತವಾಗಿ ಮೊಟ್ಟೆ ಇಟ್ಟು ಮರಿ ಮಾಡುತ್ತಿವೆ' ಎಂದು ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಮೊಹಮ್ಮದ್ ಮನ್ಸೂರ್ 'ಪ್ರಜಾವಾಣಿ'ಗೆ ತಿಳಿಸಿದರು.
- ರಣಹದ್ದುಗಳ ಆವಾಸ ಸ್ಥಾನ ವಾದ ರಾಮದೇವರ ಬೆಟ್ಟದಲ್ಲಿ ಹದ್ದುಗಳ ಸಂತತಿ ಹೆಚ್ಚಳಕ್ಕೆ ಪೂರಕ ಕ್ರಮಗಳನ್ನು ಇಲಾಖೆ ಕೈಗೊಂಡಿದೆ.
- ಕಳೆದ ಐದು ವರ್ಷಗಳಿಂದ ಬೆಟ್ಟದಲ್ಲಿ ಹದ್ದುಗಳ ಬಳಗಕ್ಕೆ ಹೊಸ ಅತಿಥಿ ಸೇರುತ್ತಿದೆ. awen ಜನಿಸಿರುವ ಮರಿ ದೊಡ್ಡ ರಣಹದ್ದುಗಳ ಜೊತೆ ಸುರಕ್ಷಿತ ವಾಗಿದೆ' ಎಂದು ಹೇಳಿದರು.
- ಅಳಿವಿನಂಚಿಗೆ ತಲುಪಿದ ರಣಹದ್ದುಗಳ ಸಂರಕ್ಷಣೆಗಾಗಿ ರಾಜ್ಯ ಸರ್ಕಾರ 2012ರಲ್ಲಿ ರಾಮದೇವರ ಬೆಟ್ಟದ ವ್ಯಾಪ್ತಿಯ 346.14 ಹೆಕ್ಟೇರ್ ಪ್ರದೇಶವನ್ನು ರಣಹದ್ದು ಅಭಯಾರಣ್ಯ ಎಂದು ಘೋಷಿಸಿದೆ.

Dr Rajkumar I A S Academy

ರಾಜ್ಯದ ಕರಾವಳಿ ಮತ್ತು ಮಲೆನಾಡಿನ ಕೊಂಡಿಯಾಗಿರುವ ಆಗುಂಬೆ ಘಾಟಿಯಲ್ಲಿ ಹಾದು ಹೋಗುವ ಕಿರಿದಾದ ರಾಷ್ಟ್ರೀಯ ಹೆದ್ದಾರಿಯನ್ನು ವಿಸ್ತರಿಸಲು ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮುಂದಾಗಿದೆ. ಪಾದಚಾರಿ ಮಾರ್ಗ ಸಹಿತ ದ್ವಿಪಥ ಹೆದ್ದಾರಿ ಅಥವಾ ಸುರಂಗ ಮಾರ್ಗ ನಿರ್ಮಾಣದ ಕಾರ್ಯಸಾಧ್ಯತೆ ಬಗ್ಗೆ ಅಧ್ಯಯನ ನಡೆಸಿ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಟೆಂಡರ್ ಕರೆದಿದೆ. ಆಗುಂಬೆಯಲ್ಲಿ ಸುರಂಗ ನಿರ್ಮಾಣ ಪರಿಸರಕ್ಕೆ ಮಾರಕವಾಗಬಹುದು ಎಂದು ಪರಿಸರವಾದಿಗಳು ಎಚ್ಚರಿಸಿದ್ದಾರೆ. ಉಡುಪಿ–ಶಿವಮೊಗ್ಗ ಜಿಲ್ಲೆಗಳ ನಡುವೆ ಸುಗಮ ಸಂಚಾರಕ್ಕೆ ರಸ್ತೆ ಅಭಿವೃದ್ಧಿ ಅಗತ್ಯ ಎಂದು ಜನಪ್ರತಿನಿಧಿಗಳು ವಾದಿಸುತ್ತಿದ್ದಾರೆ. ಈ ವಿಚಾರವು ಪರಿಸರ ಮತ್ತು ಅಭಿವೃದ್ಧಿ ನಡುವಿನ ಚರ್ಚೆಯನ್ನು ಹುಟ್ಟುಹಾಕಿದೆ



ಆಗುಂಬೆ ಘಾಟಿಯಲ್ಲಿನ ಹಿಮ್ಮುರಿ ತಿರುವುಗಳ ವಿಹಂಗಮ ನೋಟ: ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್.

• ಪ್ರವೀಣ್ ಕುಮಾರ್ ಪಿ.ವಿ.

# ಪರಿಸರ VS ಅಭಿವೃದ್ಧಿ

## ಆಗುಂಬೆ ಘಾಟಿಯಲ್ಲಿ ಸುರಂಗ ಮಾರ್ಗ: ಸೂಕ್ಷ್ಮ ಪರಿಸರಕ್ಕೆ ಧಕ್ಕೆಯ ಆತಂಕ

ರಾಷ್ಟ್ರೀಯ ಹೆದ್ದಾರಿ 169 ಎ ಉಡುಪಿ ಜಿಲ್ಲೆಯನ್ನು ಶಿವಮೊಗ್ಗ ಜಿಲ್ಲೆ ಜೊತೆ ಬೆಸೆಯುತ್ತದೆ. ಪಶ್ಚಿಮ ಘಟ್ಟದ ಮೂಲಕ ಹಾದು ಹೋಗುವ ಈ ಹೆದ್ದಾರಿ ಆಗುಂಬೆ ಘಾಟಿ ಮೂಲಕ ಸಾಗುತ್ತದೆ. ರಸ್ತೆಯು ಆಗುಂಬೆ ಘಾಟಿ ಭಾಗದಲ್ಲಿ ತೀರಾ ಕಿರಿದಾಗಿದೆ. ಇಲ್ಲಿನ ರಸ್ತೆ ಕೆಲವೆಡೆ 5 ಮೀಟರ್‌ಗಳಷ್ಟೂ ಅಗಲವಿಲ್ಲ. 14 ಹಿಮ್ಮುರಿ (ಹೇರ್‌ಪಿನ್) ತಿರುವುಗಳನ್ನು ಹೊಂದಿರುವ ಈ ಘಾಟಿಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ. ಪ್ರಯಾಣಿಕರು ಲಘು ವಾಹನಗಳ ಮೂಲಕ ಅಥವಾ ಮಿನಿ ಬಸ್‌ಗಳ ಮೂಲಕ ಮಾತ್ರ ಸಂಚರಿಸಬಹುದಷ್ಟೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಿಂದ ಆರಂಭಗೊಳ್ಳುವ ಈ ಘಾಟಿಯು ಜಿಲ್ಲೆಯನ್ನು ಚಿಕ್ಕಮಗಳೂರು ಜಿಲ್ಲೆ ಮತ್ತು ಕರಾವಳಿ ಜೊತೆಗೆ ಸಂಪರ್ಕಿಸುವ ಪ್ರಮುಖ ಕೊಂಡಿಯಾಗಿದೆ. ಆಗುಂಬೆ ಘಾಟಿಯಲ್ಲಿ ಪ್ರತಿದಿನ 10 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತವೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ ಆಗುಂಬೆವರೆಗಿನ 31 ಕಿ.ಮೀ ಉದ್ದದ ರಸ್ತೆಯನ್ನು ದ್ವಿಪಥವನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಹೆಬ್ರಿಯಿಂದ ಉಡುಪಿವರೆಗಿನ 32 ಕಿ.ಮೀ ಉದ್ದದ ರಸ್ತೆಯ ಚತುಷ್ಪಥ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ ಎನ್ನುತ್ತವೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ (ಎನ್‌ಎಚ್‌ಎಐ) ಮೂಲಗಳು.

ಮೇಗರವಳ್ಳಿಯಿಂದ ಆಗುಂಬೆ ನಡುವೆ ಸುಮಾರು ಮೂರು ಕಿ.ಮೀ ಉದ್ದದ ರಸ್ತೆಯನ್ನು ದ್ವಿಪಥಗೊಳಿಸುವ ಕಾಮಗಾರಿ ಅರಣ್ಯ ಇಲಾಖೆಯ ಅನುಮತಿ ವಿಳಂಬದ ಕಾರಣದಿಂದಾಗಿ ಇನ್ನೂ ಅನುಷ್ಠಾನವಾಗಿಲ್ಲ. ಆಗುಂಬೆಯಿಂದ ಸೋಮೇಶ್ವರವರೆಗಿನ 10 ಕಿ.ಮೀ ಉದ್ದದ ಆಗುಂಬೆ ಘಾಟಿಯ ಭಾಗ ಹಾಗೂ ಸೋಮೇಶ್ವರದಿಂದ ಹೆಬ್ರಿವರೆಗಿನ 10.6 ಕಿ.ಮೀ ಉದ್ದದ ರಸ್ತೆ ಇನ್ನೂ ವಿಸ್ತರಣೆ ಆಗಿಲ್ಲ. ವಿಸ್ತರಣೆಗೆ ಬಾಕಿ ಇರುವ ಸುಮಾರು 20 ಕಿ.ಮೀ ಉದ್ದದ ರಸ್ತೆಯು ದಟ್ಟ ಕಾನನದೊಳಗೆ ಹಾದುಹೋಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಈ ಘಾಟಿಯನ್ನು ಬಳಸುವ ಕಾರು ಮತ್ತಿತರ ವಾಹನಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಮಳೆಗಾಲದಲ್ಲಿ ಭೂಕುಸಿತ ಉಂಟಾದಾಗ, ಮರಗಳು ಬಿದ್ದಾಗ, ವಾಹನಗಳು ಕೆಟ್ಟು ನಿಂತಾಗಲೆಲ್ಲ ಆಗುಂಬೆ ಘಾಟಿಯಲ್ಲಿ ವಾಹನ ದಟ್ಟಣೆ ಸಮಸ್ಯೆ ಎದುರಾಗುವುದು ಮಾಮೂಲಿ. ಘಾಟಿಯಲ್ಲಿ ವಾಹನ ದಟ್ಟಣೆ ಉಂಟಾದಾಗ ಕೆಲವೊಮ್ಮೆ ಈ ಮಾರ್ಗದಲ್ಲಿ ವಾಹನಗಳ ಸಾಲು ಕಿಲೋಮೀಟರ್‌ಗಟ್ಟಲೆ ಬೆಳೆಯುತ್ತದೆ. ಇಲ್ಲಿ ರಸ್ತೆಯೂ ಕಿರಿದಾಗಿರುವುದರಿಂದ ಸಂಚಾರವನ್ನು ಸಹಜ ಸ್ಥಿತಿಗೆ ತರಲು ಹರಸಾಹಸ ಪಡಬೇಕಾಗುತ್ತದೆ.

ತೀರಾ ಕಡಿದಾಗಿರುವ, ದಟ್ಟವಾದ ನಿತ್ಯಹರಿದ್ವರ್ಣದ ಕಾಡುಗಳಿಂದ ಆವೃತವಾಗಿರುವ ಈ ಘಾಟಿಯಲ್ಲಿ ರಸ್ತೆ ವಿಸ್ತರಣೆಗೆ ಇರುವ ಅವಕಾಶಗಳು ಕಡಿಮೆ. ಆಗುಂಬೆ ಘಾಟಿಯ 14 ತಿರುವುಗಳ ಸಂಖ್ಯೆಯನ್ನು ಕಡಿತಗೊಳಿಸುವ ಪ್ರಸ್ತಾವವಿತ್ತು. ಭಾರಿ ಸಂಖ್ಯೆಯಲ್ಲಿ ಮರಗಳನ್ನು ಕಡಿಯಬೇಕಾಗುತ್ತದೆ ಎಂಬ ಕಾರಣಕ್ಕೆ ಆ ಪ್ರಸ್ತಾವ ಕಾರ್ಯಸಾಧುವಲ್ಲ ಎಂಬ ನಿರ್ಧಾರಕ್ಕೆ ಪ್ರಾಧಿಕಾರ ಬಂದಿತ್ತು. ಆಗುಂಬೆ ಘಾಟಿಯ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಹೆಚ್ಚಿನ ಹಾನಿ ಆಗದಂತೆ ರಸ್ತೆ ಅಭಿವೃದ್ಧಿ ಮಾಡಲು ಸುರಂಗ ಮಾರ್ಗ ನಿರ್ಮಿಸುವ ಬಗ್ಗೆ ಚರ್ಚೆ ಹಿಂದಿನಿಂದಲೂ ನಡೆಯುತ್ತಿದೆ.

**ಚರ್ಚೆ ಮತ್ತೆ ಮುನ್ನೆಲೆಗೆ:** ಈ ಹೆದ್ದಾರಿಯಲ್ಲಿ 30.75ನೇ ಕಿ.ಮೀಯಿಂದ (ಆಗುಂಬೆ) 51.60 ಕಿ.ಮೀ (ಹೆಬ್ರಿ) ನಡುವೆ (20.85 ಕಿ.ಮೀ) ಪಾದಚಾರಿ ಮಾರ್ಗ ಒಳಗೊಂಡ ದ್ವಿಪಥ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ₹2.33 ಕೋಟಿ ಮೊತ್ತದ ಟೆಂಡರ್ ಕರೆದಿರುವುದು ಸುರಂಗ ಮಾರ್ಗದ ಚರ್ಚೆ ಮತ್ತೆ ಮುನ್ನೆಲೆಗೆ ಬರುವಂತೆ ಮಾಡಿದೆ. ಡಿಪಿಆರ್ ವ್ಯಾಪ್ತಿಯು ನಿರ್ದಿಷ್ಟವಾಗಿ ಸುರಂಗ ವಿನ್ಯಾಸ ತಜ್ಞರು ಮತ್ತು ಹಿರಿಯ ಭೂ-ಭೌತಶಾಸ್ತ್ರಜ್ಞರ ತೊಡಗಿಸಿಕೊಳ್ಳುವಿಕೆ ಒಳಗೊಂಡಿದೆ; ಸುರಂಗ ಮಾರ್ಗ ನಿರ್ಮಾಣದ ಆಯ್ಕೆಯ ಕಾರ್ಯಸಾಧ್ಯತೆ ಪರೀಕ್ಷಿಸಲು, ವಿವರವಾದ ಭೂ-ತಾಂತ್ರಿಕ ಪರಿಶೀಲನೆಗೂ ಅವಕಾಶ ಕಲ್ಪಿಸಲಾಗಿದೆ.

**ಪರಿಸರವಾದಿಗಳ ಆತಂಕ:** ಇದರ ಬೆನ್ನಲ್ಲೇ, ಪರಿಸರ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದು, ಆಗುಂಬೆ ಘಾಟಿಯಲ್ಲಿ ಸುರಂಗ ಕೊರೆದಿದ್ದೇ ಆದರೆ, ಅದು ಭೂಕುಸಿತಕ್ಕೆ ಕಾರಣವಾಗಬಲ್ಲುದು ಎಂದಿದ್ದಾರೆ.

‘ಆಗುಂಬೆ ಘಾಟಿ ಸೋಮೇಶ್ವರ ವನ್ಯಜೀವಿಧಾಮದೊಳಗೆ ಹಾದುಹೋಗಿದೆ. ಈ ಘಾಟಿ ರಸ್ತೆಯ ಇಕ್ಕೆಲಗಳಲ್ಲೂ ದಟ್ಟ ಕಾನನವಿದ್ದು, ಅದು ಕಾಳಿಂಗ ಸರ್ಪ, ಸಿಂಹಬಾಲದ ಸಿಂಗಳೀಕ ಸೇರಿದಂತೆ ಹಲವು ಅಪರೂಪದ ಜೀವವೈವಿಧ್ಯದ ಆವಾಸಸ್ಥಾನ. ಇಲ್ಲಿ ಹುಟ್ಟುವ, ಹರಿಯುವ ಸಣ್ಣಪುಟ್ಟ ತೊರೆಗಳು ಘಟ್ಟದ ಕೆಳಗಿನ ನದಿಗಳನ್ನು ವರ್ಷಪೂರ್ತಿ ಜೀವಂತವಾಗಿಟ್ಟಿದೆ. ಇಲ್ಲಿ ಕಡಿದಾದ ಬೆಟ್ಟಗಳ ಇರುವಿಕೆಯ ಕಾರಣಕ್ಕೆ ತೀರ್ಥಹಳ್ಳಿ, ಶೃಂಗೇರಿ, ಕೊಪ್ಪ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆ ಬರುತ್ತದೆ. ಈ ನಿಸರ್ಗ ಸಂಪತ್ತು ಒದಗಿಸುವ ಪರಿಸರ ಸೇವೆ ಜನಸಮುದಾಯದ ಜೀವನೋಪಾಯಕ್ಕೆ ಅಮೂಲ್ಯವಾದುದು’ ಎನ್ನುತ್ತಾರೆ ಪರಿಸರ ಕಾರ್ಯಕರ್ತ ನಾಗರಾಜ ಕೂವೆ.

‘ಮಳೆಗಾಲದಲ್ಲಿ ಆಗುಂಬೆ ಘಾಟಿಯಲ್ಲಿ ಪದೇ ಪದೇ ಭೂಕುಸಿತ ಸಂಭವಿಸುತ್ತಿದೆ. ಅಲ್ಲಿ ರಸ್ತೆ ವಿಸ್ತರಣೆಗಾಗಿ ಅಕ್ಕಪಕ್ಕದ ಗುಡ್ಡಗಳನ್ನು ಕಡಿದರೆ ಭೂಕುಸಿತ ಮತ್ತಷ್ಟು ಜಾಸ್ತಿ ಆಗಲಿದೆ. ಕೆಲವು ತಿರುವುಗಳಲ್ಲಿ ರಸ್ತೆ ವಿಸ್ತರಣೆ ಮಾಡಲು ಬೇಕಾಗುವಷ್ಟು ಜಾಗವೂ ಇಲ್ಲ. ಅಲ್ಲಿ ಜೆಸಿಬಿ, ಹಿಟಾಚಿಯಂತಹ ಭಾರಿ ಯಂತ್ರಗಳನ್ನು ಬಳಸಿ ಕಾಮಗಾರಿ ನಡೆಸುವುದು ಅವೈಜ್ಞಾನಿಕ. ಅದರ ಬದಲು ಈಗ ಇರುವ ರಸ್ತೆಗೆ ಪ್ರತಿವರ್ಷ ಡಾಂಬರು ಹಾಕಿ ಚೆನ್ನಾಗಿ ನಿರ್ವಹಣೆ ಮಾಡುವುದು ಜನರಿಗೂ ಇಲ್ಲಿನ ವನ್ಯಜೀವಿಗಳಿಗೂ ಒಳ್ಳೆಯದು. ಆಗುಂಬೆ ಘಾಟಿಯಂತಹ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ರಸ್ತೆ ವಿಸ್ತರಣೆಯಂತಹ ಅವೈಜ್ಞಾನಿಕ ಯೋಜನೆಗಳಿಗೆ ರಾಜ್ಯ ಸರ್ಕಾರ ಅವಕಾಶ ಕೊಡಬಾರದು. ಸುರಂಗ ಮಾರ್ಗಕ್ಕೆ ಡಿಪಿಆರ್ ತಯಾರಿಸಲು ವನ್ಯಜೀವಿ ವಿಭಾಗ ಬಿಡಬಾರದು’ ಎಂಬುದು ಅವರ ಆಗ್ರಹ.

ಪೂರಕ ಮಾಹಿತಿ: ವೆಂಕಟೇಶ್ ಜಿ.ಎಚ್.

### ಆತಂಕ ಏನೇನು?



- ಸುರಂಗ ನಿರ್ಮಾಣದಿಂದ ಭೂಪದರಕ್ಕೆ ಹಾನಿಯಾಗಬಹುದು
- ಭೂಕುಸಿತದ ಸಮಸ್ಯೆ ತೀವ್ರವಾಗಬಹುದು
- ಕಾಮಗಾರಿಯಿಂದ ಅರಣ್ಯ ನಾಶದ ಜೊತೆಗೆ ಪ್ರಾಣಿ ಸಂಕುಲಕ್ಕೂ ತೊಂದರೆ

### ಜೀವವೈವಿಧ್ಯದ ಮೇಲೆ ಪರಿಣಾಮ



ಆಗುಂಬೆ ಘಾಟಿಯ ಸೂಕ್ಷ್ಮ ಪರಿಸರದಲ್ಲಿ ಸುರಂಗ ಮಾರ್ಗ, ದ್ವಿಪಥ ರಸ್ತೆ, ಪಾದಚಾರಿ ಮಾರ್ಗ ನಿರ್ಮಿಸಿದರೆ, ಅದರ ದುಷ್ಪರಿಣಾಮಗಳನ್ನು ಇಲ್ಲಿನ ಸಮೃದ್ಧ ಜೀವವೈವಿಧ್ಯ ಹಾಗೂ ಘಟ್ಟದ ಮೇಲಿನ ಮತ್ತು ಕೆಳಗಿನ ರೈತರು ಎದುರಿಸಬೇಕಾಗುತ್ತದೆ. ಇಲ್ಲಿನ ಸೂಕ್ಷ್ಮ ಭೂರಚನೆ, ಮಣ್ಣಿನ ಗುಣಗಳನ್ನು ಗಮನಿಸಿದಾಗ ಇಲ್ಲಿ ಸುರಂಗ ಮಾರ್ಗದ ಹೆಸರಿನಲ್ಲಿ ಭೂಮಿ ಕೊರೆಯುವುದು ಮೂರ್ಖತನ. ಭಾರಿ ಯಂತ್ರಗಳನ್ನು ಬಳಸಿ ಭೂಮಿಯನ್ನು ಕೊರೆಯುವುದರಿಂದ, ಈ ಪ್ರದೇಶದಲ್ಲಿ ಭೂಕುಸಿತ ನಿಶ್ಚಿತ. ಆವಾಸ ಸ್ಥಾನ ನಾಶವಾದರೆ ಭವಿಷ್ಯದಲ್ಲಿ ಕಾಳಿಂಗ ಸರ್ಪಗಳು ಜನವಸತಿ ಪ್ರದೇಶಗಳತ್ತ ಮುಖಮಾಡುತ್ತವೆ. ಆನೆ, ಕಾಟಿ, ಹುಲಿಗಳಂತೆ ಅವುಗಳ ವರ್ತನೆಗಳಲ್ಲೂ ಬದಲಾವಣೆ ಆಗಬಹುದು. ಇದರಿಂದ ಮಾನವ–ಕಾಳಿಂಗ ಸರ್ಪ ಸಂಘರ್ಷ ಹುಟ್ಟಬಹುದು.

**ನಾಗರಾಜ ಕೂವೆ,** ಪರಿಸರ ಕಾರ್ಯಕರ್ತ

### ಸಮಸ್ಯೆಗಳಿಗೆ ಹೆದ್ದಾರಿ ವಿಸ್ತರಣೆ ಪರಿಹಾರ



ಆಗುಂಬೆ ಘಾಟಿಯು ಕರಾವಳಿಯೊಂದಿಗೆ ಮಧ್ಯಕರ್ನಾಟಕ ಹಾಗೂ ಮಲೆನಾಡನ್ನು ಬೆಸೆಯುವ ರಾಜಮಾರ್ಗ. ನಿತ್ಯ ಇಲ್ಲಿ ಸಾವಿರಾರು ವಾಹನಗಳು ಓಡಾಡುತ್ತವೆ. ಆಸ್ಪತ್ರೆಗೆ ರೋಗಿಗಳು, ಕರಾವಳಿ ಭಾಗಕ್ಕೆ ಆಹಾರ ಸಾಮಗ್ರಿ, ತರಕಾರಿ, ಹಣ್ಣುಪೂರೈಕೆಯ ಜೊತೆಗೆ ಅಲ್ಲಿಂದ ಮತ್ಸ್ಯ ಹಾಗೂ ಪೆಟ್ರೋಲಿಯಂ ಉತ್ಪನ್ನಗಳು ಇತ್ತ ಕಡೆ ಬರುತ್ತಿವೆ. ಪ್ರಮುಖ ಧಾರ್ಮಿಕ ಕೇಂದ್ರಗಳ ಜೊತೆಗೆ ಕೇರಳ–ಕರ್ನಾಟಕದ ಸಂಪರ್ಕದ ಕೊಂಡಿಯೂ ಹೌದು. ವರ್ಷದಿಂದ ವರ್ಷಕ್ಕೆ ಈ ಮಾರ್ಗದಲ್ಲಿ ವಾಹನ ದಟ್ಟಣೆ ಹೆಚ್ಚುತ್ತಿದ್ದು, ಅದೇ ರೀತಿ ಭೂ ಕುಸಿತವೂ ಸಂಭವಿಸುತ್ತಿರುತ್ತದೆ. ಮಳೆಗಾಲದಲ್ಲಿ ವಾಹನ ಸಂಚಾರ ಸ್ಥಗಿತಗೊಳ್ಳುತ್ತದೆ. ಹೀಗಾಗಿ ಅಲ್ಲಿನ ಸಮಸ್ಯೆ ನಿವಾರಣೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎರಡು ಅವಕಾಶಗಳನ್ನು ಅವಲೋಕಿಸುತ್ತಿದೆ. ಅದರ ಭಾಗವಾಗಿ ಘಾಟಿಯ ಈಗಿನ ಕಿರಿದಾದ ರಸ್ತೆಯನ್ನು ವಿಸ್ತರಿಸಲು ಹಾಗೂ ಸುರಂಗ ಮಾರ್ಗ ನಿರ್ಮಾಣದ ಬಗ್ಗೆ ಡಿಪಿಆರ್ ತಯಾರಿಸಲು ಈಗ ಟೆಂಡರ್ ಕರೆದಿದೆ. ರಸ್ತೆಯ ವಿಸ್ತರಣೆ, ಸುರಂಗ ಮಾರ್ಗ ಇವೆರಡರಲ್ಲಿ ಯಾವುದು ಸೂಕ್ತ ಆಯ್ಕೆ ಎಂಬುದರ ಬಗ್ಗೆ ತಜ್ಞರ ವರದಿ ಆಧರಿಸಿ ನಂತರ ಕ್ರಮ ಕೈಗೊಳ್ಳಲಿದೆ.

**ಬಿ.ವೈ.ರಾಘವೇಂದ್ರ,** ಶಿವಮೊಗ್ಗ ಸಂಸದ

### ಆಗುಂಬೆ ವೈಶಿಷ್ಟ್ಯ



- ಪಶ್ಚಿಮ ಘಟ್ಟದ ಪ್ರಮುಖ ಪ್ರದೇಶ, ಅಪರೂಪದ ಜೀವ ವೈವಿಧ್ಯ, ಪರಿಸರ ಸೂಕ್ಷ್ಮ ತಾಣ
- ಸಮುದ್ರ ಮಟ್ಟದಿಂದ 2,700 ಅಡಿಗಳಷ್ಟು ಎತ್ತರದಲ್ಲಿರುವ ಪ್ರದೇಶ
- ಅತಿ ಹೆಚ್ಚು ಮಳೆಯಾಗುವ ಪ್ರದೇಶ ಎಂಬ ಹೆಗ್ಗಳಿಕೆ
- ಕಾಳಿಂಗ ಸರ್ಪ, ಸಿಂಹಬಾಲ ಸಿಂಗಳೀಕಗಳ ಆವಾಸ
- ರುದ್ರ ರಮಣೀಯ ಪ್ರಕೃತಿ ಸೌಂದರ್ಯ, ನಯನ ಮನೋಹರ ಸೂರ್ಯಾಸ್ತಕ್ಕೆ ಹೆಸರುವಾಸಿ

**20.85** ಕಿ.ಮೀ ಅಭಿವೃದ್ಧಿಗೆ ಗುರುತಿಸಲಾದ ಹೆದ್ದಾರಿಯ ಉದ್ದ

**₹2.33** ಕೋಟಿ ಡಿಪಿಆರ್ ಸಿದ್ಧಪಡಿಸಲು ನಿಗದಿಪಡಿಸಿರುವ ವೆಚ್ಚ

**10,000** ಕ್ಕೂ ಹೆಚ್ಚು ಆಗುಂಬೆ ಘಾಟಿಯಲ್ಲಿ ಪ್ರತಿ ದಿನ ಸಂಚರಿಸುವ ವಾಹನಗಳು



ಆಗುಂಬೆ ಘಾಟಿಯ ಹಿಮ್ಮುರಿ ತಿರುವು

Publication Date
19/02/2026

Presented by

# ಪಂಕಜ್ ಅದ್ವಾನಿಗೆ ಕಿರೀಟ



ಪಂಕಜ್ ಅದ್ವಾನಿ

ಬೆಂಗಳೂರು: ದಿಗ್ಗಜ ಆಟಗಾರ ಪಂಕಜ್ ಅದ್ವಾನಿ ಅವರು ಚೊಚ್ಚಲ ಆವೃತ್ತಿಯ ಲಿಬೆರ್‌ವಿನ್ ಚಾಂಪಿಯನ್ಸ್ ಕಪ್ ಸ್ನೂಕರ್ ಟೂರ್ನಿಯ ಕಿರೀಟ ಗೆದ್ದುಕೊಂಡರು. ಅವರು, ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಬುಧವಾರ ನಡೆದ ಫೈನಲ್‌ನಲ್ಲಿ 6–3ರಿಂದ ಕಮಲ್ ಚಾವ್ಲಾ ಅವರನ್ನು ಮಣಿಸಿದರು.

ಇದಕ್ಕೆ ಮೊದಲು ನಡೆದ ಸೆಮಿಫೈನಲ್‌ನಲ್ಲಿ ಅದ್ವಾನಿ ಅವರು 1–4ರ ಹಿನ್ನಡೆಯಿಂದ ಚೇತರಿಸಿಕೊಂಡು 5–4ರಿಂದ ಲಕ್ಷ್ಮಣ್ ರಾವತ್ ವಿರುದ್ಧ ಅಮೋಘ ಜಯ ಸಾಧಿಸಿದರು. ಈ ಪಂದ್ಯದಷ್ಟೇ ರೋಚಕವಾಗಿದ್ದ ಇನ್ನೊಂದು ಸೆಮಿಫೈನಲ್‌ನಲ್ಲಿ ಕಮಲ್ ಅವರು 5–4ರಿಂದ ಸೌರವ್ ಕೊಠಾರಿ ಅವರನ್ನು ಮಣಿಸಿದ್ದರು.

## ❖ 'ಮೊಬೈಲ್ ಬಿಡಿ-ಪುಸ್ತಕ ಹಿಡಿ' ಅಭಿಯಾನ

**ಸಂದರ್ಭ: ಮೊಬೈಲ್ ಗೀಳಿನಿಂದ ಮಕ್ಕಳನ್ನು ಹೊರತರಲು ಶಾಲಾ ಶಿಕ್ಷಣ ಇಲಾಖೆ 'ಮೊಬೈಲ್ ಬಿಡಿ-ಪುಸ್ತಕ ಹಿಡಿ' ಅಭಿಯಾನ ಆರಂಭಿಸಿದೆ.**

- ಮೊಬೈಲ್‌ನ ಅತಿಯಾದ ಬಳಕೆ ಓದು ಹಾಗೂ ಕ್ರೀಡೆ ಸೇರಿದಂತೆ ದೈಹಿಕ ಚಟುವಟಿಕೆಗಳ ಮೇಲಿನ ಆಸಕ್ತಿಯನ್ನು ಕುಗ್ಗಿಸುತ್ತದೆ.
- ವಿದ್ಯಾರ್ಥಿ-ಗಳನ್ನು ಮೊಬೈಲ್ ಗೀಳಿನಿಂದ ಹೊರ ತರಲು ಸೂಕ್ತ ವಾತಾವರಣ ಕಲ್ಪಿಸುವ ಜವಾಬ್ದಾರಿಯನ್ನು ಅಯಾ ಶಾಲೆಗಳ ಶಿಕ್ಷಕರು, ಪೋಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳಿಗೆ (ಎಸ್‌ಡಿಎಂಸಿ) ನೀಡಲಾಗಿದೆ.
- ಸೈಬರ್ ಅಪರಾಧ, ಆನ್‌ಲೈನ್ ವಂಚನೆ, ಡಿಜಿಟಲ್ ಅರೆಸ್ಟ್ ಹಾಗೂ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ನೈಜ ಘಟನೆಗಳನ್ನು ಹಂಚಿಕೊಂಡಾಗ ಮಕ್ಕಳು ವಾಸ್ತವ ಸ್ಥಿತಿ ಅರ್ಥಮಾಡಿಕೊಳ್ಳುತ್ತಾರೆ. ವಿವಿಧ ಇಲಾಖೆಗಳ ಸಹಯೋಗದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ-ಗಳನ್ನು ಆಯೋಜಿಸಬೇಕು. ಮಕ್ಕಳಿಗೆ ಯೋಗಾಭ್ಯಾಸ ಮಾಡಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

## ❖ ಬನ್ನೇರುಘಟ್ಟ ಇಎಸ್‌ಝಡ್ ಮಾರ್ಚ್ 16ರಂದು ವಿಚಾರಣೆ

**ಸಂದರ್ಭ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪರಿಸರ ಸೂಕ್ಷ್ಮ ಪ್ರದೇಶ ವನ್ನು (ಇಎಸ್‌ಝಡ್) ರಾಜ್ಯ ಸರ್ಕಾರ ಕಡಿಮೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 16ರಂದು ವಿಚಾರಣೆ ನಡೆಸಲಿದೆ.**

- ಪರಿಸರಕ್ಕೆ ಸಂಬಂಧಿಸಿದ ಸುಮಾರು 20 ಮೇಲ್ಮನವಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, 'ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಮಾರ್ಚ್ 16ರಂದು ಮಧ್ಯಾಹ್ನ ವಿಚಾರಣೆ ನಡೆಸಿ ಇತ್ಯರ್ಥ ಮಾಡಲಾಗುವುದು' ಎಂದು ತಿಳಿಸಿತು.
- ಬನ್ನೇರುಘಟ್ಟ ಇಎಸ್‌ಝಡ್ ವ್ಯಾಪ್ತಿಯನ್ನು 268 ಚದರ ಕಿ.ಮೀ.ನಿಂದ 168 ಚದರ ಕಿ.ಮೀ.ಗೆ ಇಳಿಸಿರುವ ಕರ್ನಾಟಕ ಸರ್ಕಾರದ ಕ್ರಮ ಪ್ರಶ್ನಿಸಿ ಬೆಂಗಳೂರಿನ ನಿವಾಸಿ ಬೆಳ್ಳಿಯಪ್ಪ ಮತ್ತಿತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಉನ್ನತಾಧಿಕಾರ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.
- ಸಮಿತಿಯು ಸುಪ್ರೀಂ ಕೋರ್ಟ್‌ಗೆ ಜನವರಿ 7ರಂದು 524 ಪುಟಗಳ ವರದಿ ಸಲ್ಲಿಸಿತ್ತು. ಯಾವುದೇ ವೈಜ್ಞಾನಿಕ, ಪರಿಸರ ಅಥವಾ ಭೂದೃಶ್ಯ ಮಟ್ಟದ ಅಧ್ಯಯನ ಹಾಗೂ ಮೌಲ್ಯಮಾಪನ ನಡೆಸದೆಯೇ ಪರಿಸರ ಸೂಕ್ಷ್ಮ ಪ್ರದೇಶವನ್ನು ನಿರಂತರವಾಗಿ ಕಡಿತ ಮಾಡಲಾಗಿದೆ ಎಂದೂ ಸಮಿತಿ ವರದಿಯಲ್ಲಿ ಉಲ್ಲೇಖಿಸಿತ್ತು.
- ಸರ್ಕಾರದ ಕ್ರಮವನ್ನು ಸಿಇಸಿ ಕಟುವಾಗಿ ಟೀಕಿಸಿತ್ತು. ಈ ಕ್ರಮವು ಉದ್ಯಾನದ ಪರಿಸರ ವಿಜ್ಞಾನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಭಿಪ್ರಾಯಪಟ್ಟಿತ್ತು,

Dr. Rajkumar IAS Academy

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ನೆಲಸಿರುವ ಕೊರಗ ಸಮುದಾಯದ ವಂಶಾವಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದಿರುವ ಅಧ್ಯಯನವು ಈ ಬುಡಕಟ್ಟು ಜನರ ಮೂಲದ ಬಗ್ಗೆ ಹೊಸ ನೋಟ ಬೀರಿದೆ. ಕೊರಗರ ವಂಶಜರು ಮೂಲ ದ್ರಾವಿಡ ಸಂಸ್ಕೃತಿಯ ಪ್ರತಿನಿಧಿಗಳು ಎಂದು ಅಧ್ಯಯನ ಪ್ರತಿಪಾದಿಸಿದೆ. ಅಧ್ಯಯನ ವರದಿಯು ಯುರೋಪಿಯನ್ ಜರ್ನಲ್ ಆಫ್ ಹ್ಯೂಮನ್ ಜೆನೆಟಿಕ್ಸ್‌ನಲ್ಲಿ ಪ್ರಕಟವಾಗಿದೆ

# ಕೊರಗರ ವಂಶಜರು ಮೂಲದ್ರಾವಿಡರು

## ಮಂಗಳೂರು ವಿ.ವಿ, ಯೆನೆಪೋಯ ಡೀಮ್ಡ್ ವಿ.ವಿಯಿಂದ ವಂಶಾವಳಿ ಅಧ್ಯಯನ

• ಸಂಧ್ಯಾ ಹೆಗಡೆ

ಶತಮಾನಗಳಿಂದ ಬವಣೆ ಬೇಗುದಿಗಳಲ್ಲಿ ಬೆಂದು, 'ಅಸ್ಪೃಶ್ಯತೆ'ಯ ಕೂಪದಲ್ಲಿ ನಲುಗಿ, ಅಸಹಾಯಕತೆಯನ್ನೇ ಹೊದ್ದುಕೊಂಡಿರುವ ಆದಿ ಬುಡಕಟ್ಟು ಸಮುದಾಯವೆಂದರೆ, ಅದು ಕೊರಗ ಸಮುದಾಯ. ದಕ್ಷಿಣ ಕನ್ನಡ, ಉಡುಪಿ, ನೆರೆಯ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗಳಲ್ಲಿ ಕೊರಗ ಕುಟುಂಬಗಳು ನೆಲಸಿವೆ. ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲೂ ಚದುರಿದಂತೆ ಕೆಲವು ಕುಟುಂಬಗಳು ಇವೆ.

ತಲೆಮಾರುಗಳಿಂದ ಜೀವಂತವಾಗಿದ್ದ ಸಾಮಾಜಿಕ ಅನಿಷ್ಟಗಳಾದ ಅಜಲು (ಮೇಲ್ಜಾತಿಯವರ ಉಗುರು ಮತ್ತು ಕೂದಲು ಅನ್ನಕ್ಕೆ ಬೆರೆಸಿ ತಿನ್ನುವುದು, ಕಂಬಳ ಗದ್ದೆಯಲ್ಲಿ ಕೊರಗರನ್ನು ಓಡಿಸಿ, ಕೆರೆಯಲ್ಲಿ ಶತ್ರುಗಳು ಗಾಜಿನ ಚೂರು, ಮುಳ್ಳು ಮತ್ತಿತರ ಅಪಾಯದ ವಸ್ತು ಹಾಕಿದ್ದಾರೆಯೇ ಎಂದು ಪರೀಕ್ಷಿಸುವುದು... ಇಂತಹ ಹೀನ ಆಚರಣೆಗಳು) ಮತ್ತು ಅಸ್ಪೃಶ್ಯತೆಯಿಂದಾಗಿ ಸಮಾಜದಿಂದ ಪ್ರತ್ಯೇಕಿಸಲ್ಪಟ್ಟಿರುವ ಕೊರಗರು, ಅತ್ತ ಅಭಿವೃದ್ಧಿಯ ಪಥಕ್ಕೆ ತೆರೆದುಕೊಳ್ಳಲೂ ಆಗದೆ, ಇತ್ತ ಸಮುದಾಯದ ಆಚರಣೆಗಳಿಂದ ಕಳಚಿಕೊಳ್ಳಲೂ ಆಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

ಕೊರಗರು ಇಂದಿಗೂ ಈ ಎಲ್ಲ ತಲ್ಲಣ, ನೋವುಗಳನ್ನು ಅನುಭವಿಸುತ್ತಿದ್ದಾರೆ. ಇವರ ವಂಶಾವಳಿಯ (ಜಿನೋಮಿಕ್) ಅಧ್ಯಯನವು, ಸಮುದಾಯವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವ ಆಶಾಭಾವ ಮೂಡಿಸಿದೆ.

ಮಂಗಳೂರು ವಿಶ್ವವಿದ್ಯಾಲಯದ ಪ್ರಾಣಿ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಎಸ್. ಮುಸ್ತಾಕ್, ಮುಖ್ಯ ಸಂಶೋಧಕ ಜೈಸನ್ ಜೀವನ್ ಸಿಕ್ವೇರಾ ಹಾಗೂ ಯೆನೆಪೋಯ ಡೀಮ್ಡ್ ವಿಶ್ವವಿದ್ಯಾಲಯದ ಪ್ರೊ.ರಣಜಿತ್ ದಾಸ್ ಜಂಟಿಯಾಗಿ ನಡೆಸಿದ ಜಿನೋಮಿಕ್ ಅಧ್ಯಯನವು, ಕೊರಗರ ಪೂರ್ವಜರು ಪ್ರಾಚೀನ 'ಪ್ರೊಟೊ ದ್ರಾವಿಡ' ಸಂಸ್ಕೃತಿಯ ಪ್ರತಿನಿಧಿಗಳು ಎಂದು ಹೇಳಿದೆ.


ಪ್ರೊ. ಮುಸ್ತಾಕ್

ಈವರೆಗಿನ ಸಂಶೋಧನೆ ಪ್ರಕಾರ, ಭಾರತೀಯರಿಗೆ ಮೂರು ಪೂರ್ವಜ ಮೂಲಗಳಿವೆ ಎಂದು ನಂಬಲಾಗಿತ್ತು (ಆಸ್ಟ್ರೊ ಏಷಿಯಾಟಿಕ್ ಮತ್ತು ಟಿಬೆಟೊ ಬರ್ಮನ್ ಸೇರಿಸಿದರೆ ಐದು). ಅವುಗಳೆಂದರೆ ಅಂಡಮಾನ್ ದ್ವೀಪದಲ್ಲಿ ಬೇಟೆಯಾಡುವ ಜನಾಂಗಗಳಿಗೆ ಸೇರಿದ ಪ್ರಾಚೀನ ದಕ್ಷಿಣ ಭಾರತೀಯರು, ಸಿಂಧೂ ನಾಗರಿಕತೆಯ ಅಂಚಿನ ಜನರು ಹಾಗೂ ಇರಾನ್ ಪರ್ವತ ಪ್ರದೇಶದ ಪ್ರಾಚೀನ ಕೃಷಿಕರು. ಆದರೆ, ಈ ಸಂಶೋಧಕರ ಅಧ್ಯಯನವು ಇವುಗಳ ಜೊತೆಗೆ ಭಾರತೀಯರಿಗೆ ನಾಲ್ಕನೆಯ ವಂಶವೃಕ್ಷವೊಂದಿದೆ, ಅದು 'ಪ್ರೊಟೊ ದ್ರಾವಿಡಿಯನ್' (ಮೂಲ ದ್ರಾವಿಡ ಸಂಸ್ಕೃತಿಗೆ ಸಂಬಂಧಿಸಿದ) ಎಂದು ಅಭಿಪ್ರಾಯಪಟ್ಟಿದೆ.


ರಣಜಿತ್ ದಾಸ್

**ಅಧ್ಯಯನದ ಕಲ್ಪನೆ ಮೊಳೆತಿದ್ದು ಹೇಗೆ?:** ದಕ್ಷಿಣ ಕನ್ನಡ ಜಿಲ್ಲೆಯ ಕಾಡಂಚಿನಲ್ಲಿ ಬದುಕು ಕಟ್ಟಿಕೊಂಡಿರುವ ಕೊರಗರ 'ಕೊರಗ' ಮಾತೃಭಾಷೆಯಲ್ಲಿರುವ ಪದಗಳ ಉಚ್ಚಾರಣೆ, ಗುಣವಿಶೇಷಗಳು ಅಧ್ಯಯನಕ್ಕೆ ಮೂಲ ಪ್ರೇರಣೆ.

ಮುಖ್ಯ ಸಂಶೋಧಕ ಜೈಸನ್ ಸಿಕ್ವೇರಾ ಹೇಳುವಂತೆ, 'ದ್ರಾವಿಡ ಕುಟುಂಬಕ್ಕೆ ಸೇರಿದವೆಂದು ಸಾಬೀತಾಗಿರುವ ಪೂರ್ವ ಭಾರತದ ಒರಾಂವ್ (ಕುರುಖ್) ಭಾಷೆ, ಬಲೂಚಿಸ್ತಾನ, ಅಫ್ಘಾನಿಸ್ತಾನದ ದಕ್ಷಿಣ ಪ್ರಾಂತ್ಯದ ದ್ರಾವಿಡ ಜನಾಂಗದ 'ಬ್ರಾಹುಯಿ' ಭಾಷೆ ಹಾಗೂ ನಮ್ಮ ನೆಲದ ಕೊರಗರ ಭಾಷೆಗಳ ನಡುವೆ ಸಾಮ್ಯತೆ ಇರುವ ಕಾರಣ ಇವುಗಳ ತೌಲನಿಕ ಅಧ್ಯಯನ, ಭಾಷೆಗಳ ವೈಶಿಷ್ಟ್ಯ ಗುರುತಿಸುವುದು ಅಧ್ಯಯನದ ಪ್ರಮುಖ ಅಂಶವಾಗಿತ್ತು. ಈ ಭಾಷಾತ್ಮಕ ನಂಟು ಮೂಡಿಸಿದ ಕುತೂಹಲವು, ಆನುವಂಶಿಕ ಮೂಲದಲ್ಲೂ ಪ್ರತಿಫಲಿಸಬಹುದೆಂದು ದ್ವಿತೀಯ ಅಧ್ಯಯನವನ್ನು ವಂಶವಾಹಿ ಮೇಲೆ ನಡೆಸಿದಾಗ, ಅಚ್ಚರಿಯ ಫಲಿತಾಂಶ ದೊರೆತಿದೆ'.


ಜೈಸನ್ ಸಿಕ್ವೇರಾ

ಆನುವಂಶೀಯತೆ ಮತ್ತು ಭಾಷೆ ನಡುವಿನ ಹೋಲಿಕೆ ಕಂಡುಕೊಳ್ಳುವ ಉದ್ದೇಶದಿಂದ ಸಂಶೋಧನಾ ತಂಡವು ಡೆನ್ಮಾರ್ಕ್‌ನ ಭಾಷಾ ವಿಜ್ಞಾನಿ ಪ್ರೊ.ಜಾರ್ಜ್ ವ್ಯಾನ್ ಡ್ರಿಮ್ ಅವರ ನೆರವು ಪಡೆದಿದ್ದು, ಈ ವೇಳೆ ದೊರೆತ ಸುಳಿವುಗಳು, ಮಾಹಿತಿ ಬೆಂಬಲಿತ ವಿಶ್ಲೇಷಣೆಗಳು ಹೆಚ್ಚಿನ ಸಂಶೋಧನೆಗೆ ಇಂಬು ನೀಡಿದವು.

ಕೊರಗರ ಬಗ್ಗೆ ಅನೇಕರು ಅಧ್ಯಯನ ಮಾಡಿದ್ದಾರೆ. 2003ರಲ್ಲಿ ನಡೆದ ಅಧ್ಯಯನದಲ್ಲಿ ಕೊರಗರು ಸೇರಿದಂತೆ ಎಲ್ಲ ಬುಡುಕಟ್ಟು ಸಮುದಾಯಗಳು ಒಂದೇ ವಂಶಾವಳಿಗೆ ಸೇರಿರಬಹುದೆಂದು ವಿಶ್ಲೇಷಿಸಲಾಗಿತ್ತು. ವಿದೇಶಿ ಅಧ್ಯಯನಕಾರರಿಂದ ನಡೆದ ಈ ಅಧ್ಯಯನವು ಅಪರಿಪೂರ್ಣ ಎಂಬುದು ಇಂದಿನ ಸಂಶೋಧಕರ ವಾದ.

**ಮೊದಲ ಅಧ್ಯಯನದ ಸಾರವೇನು?:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷಿಕರ ನಡುವೆ ಇರುವ ಇವರು 'ಕೊರಗ' ಮಾತೃಭಾಷೆಯ ದೇಸಿತನ ಉಳಿಸಿಕೊಂಡವರು. ಸಂಶೋಧನೆ ಈ ವಿಷಯವನ್ನೇ ಕೇಂದ್ರೀಕರಿಸಿತ್ತು.

'ಕೊರಗ, ಬ್ರಾಹುಯಿ ಹಾಗೂ ಒರಾಂವ್ (ಕುರುಖ್) ಭಾಷೆ ನಡುವೆ ಪ್ರಾಚೀನ ಬಂಧ ಇರುವುದು ಕಂಡುಬಂತು. ಇದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ, ಮೂರು ಜನಾಂಗಗಳು ಸುಮಾರು 4,400 ವರ್ಷಗಳ ಹಿಂದೆ ಒಂದೇ ಪೂರ್ವಜರನ್ನು ಹೊಂದಿರುವ ಸಾಧ್ಯತೆಯನ್ನು ತೆರೆದಿಟ್ಟಿದೆ. ಹರಪ್ಪ ನಾಗರಿಕತೆಗೆ ಸಮೀಪದ ಕಾಲವಿದು. ನಂತರದ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಪಲ್ಲಟಗಳ ನಡುವೆ, ಈ ಸಮುದಾಯಗಳು ಹರಡಿ ಹಂಚಿಹೋಗಿರಬಹುದು' ಎನ್ನುತ್ತಾರೆ ಜೈಸನ್ ಸಿಕ್ವೇರಾ.

ಎರಡನೇ ಅಧ್ಯಯನದಲ್ಲಿ ಸಂಶೋಧಕರು ಮಾನವನಲ್ಲಿರುವ ಸಂಪೂರ್ಣ ನ್ಯೂಕ್ಲಿಯರ್ ಡಿಎನ್‌ಎ ಸಂಯೋಜನೆಯನ್ನು ವಿಶ್ಲೇಷಿಸಿದ್ದಾರೆ. ಈ ಸಂಶೋಧನೆಯ ಮುಖ್ಯ ಉದ್ದೇಶ ಕೊರಗರ ಮೂಲದ ನಿಖರ ಸ್ವರೂಪವನ್ನು ಪತ್ತೆ ಹಚ್ಚುವುದಾಗಿತ್ತು.

**ಇರಾನ್ ವಂಶಜರ ನಂಟು:** ಪ್ರತಿ ಮನುಷ್ಯನಲ್ಲೂ ಅವನ ಪೂರ್ವಜರ ಅಂಶ ಅಡಗಿರುತ್ತದೆ. ಪ್ರಾದೇಶಿಕವಾಗಿ ಈ ಅಂಶವು ವಿಭಿನ್ನವಾಗಿರುತ್ತದೆ. ಬಹುತೇಕ ಭಾರತೀಯ ಬುಡಕಟ್ಟು ಸಮುದಾಯಗಳಲ್ಲಿ ಇದು 'M' ಪ್ರಭೇದಕ್ಕೆ (ಹ್ಯಾಪ್ಲೊಗ್ರೂಪ್-ಒಂದೇ ಪೂರ್ವಜರನ್ನು ಹೊಂದಿರುವ ಆನುವಂಶಿಕ ಜನಾಂಗಗಳ ಗುಂಪು) ಸೇರಿರುತ್ತದೆ. ಆದರೆ, ಪಶ್ಚಿಮ ಪ್ರದೇಶಗಳಲ್ಲಿ N, R, U ಹೀಗೆ ಬೇರೆ ಪ್ರಭೇದಗಳು ಕಂಡು ಬರುತ್ತವೆ. ವಿಶೇಷವೇನೆಂದರೆ, ಕೊರಗರಲ್ಲಿ U1 ಮಾದರಿ ಪ್ರಮಾಣ ಅಧಿಕವಾಗಿರುವುದು ಕಂಡುಬಂದಿದೆ. ಭಾರತದಲ್ಲಿ U1 ಹ್ಯಾಪ್ಲೊಗ್ರೂಪ್ ಅತ್ಯಂತ ವಿರಳವಾಗಿವೆ ಎಂದು ವಿಶ್ಲೇಷಿಸಿರುವ ಸಂಶೋಧಕರು, ಇರಾನ್‌ನಲ್ಲಿ ಸುಮಾರು 4,000 ವರ್ಷಗಳ ಹಿಂದಿನ ನಾಗರಿಕತೆಯಲ್ಲಿ ಇದೇ ಹ್ಯಾಪ್ಲೊಗ್ರೂಪ್ ಇರುವುದನ್ನು ವೈಜ್ಞಾನಿಕ ಅಧ್ಯಯನಗಳ ಮೂಲಕ ಪತ್ತೆ ಮಾಡಿದ್ದಾರೆ.

ಅಸ್ಥಿಪಂಜರಗಳಿಂದ ಡಿಎನ್‌ಎ ಸಂಗ್ರಹಿಸಿ ಈ ಅಧ್ಯಯನ ಮಾಡಬೇಕಾಗುತ್ತದೆ. ಇರಾನ್‌ನ ಪೂರ್ವಜ ವಂಶಜರ ಹ್ಯಾಪ್ಲೊಗ್ರೂಪ್ (ಇಂದಿನ ಇರಾನಿ ಪ್ರಜೆಗಳಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲ. ಯಾಕೆಂದರೆ ಇಂದು ಅಲ್ಲಿ ಬೇರೆಯೇ ಜನಾಂಗದ ವಂಶಸ್ಥರು ಇದ್ದಾರೆ) ಮತ್ತು ಇಂದಿನ ಕೊರಗರ ಹ್ಯಾಪ್ಲೊಗ್ರೂಪ್ ಒಂದೇ ಆಗಿವೆ. ಕಾಲಚಕ್ರದಲ್ಲಿ ಈ ಪೂರ್ವಜ ತಲೆಮಾರಿನ ಕೊಂಡಿ ಕಳಚಿ, ಒಂದೊಂದು ಗುಂಪು ಒಂದೊಂದು ಪ್ರದೇಶಕ್ಕೆ ಸಂಚರಿಸಿರುವ ಸಾಧ್ಯತೆ ಇದೆ ಎಂದು ಅಂದಾಜಿಸಿದ್ದಾರೆ.

ಕೊರಗರ ಆನುವಂಶೀಯತೆಯಲ್ಲಿ ಕಂಡುಬಂದ ಇರಾನ್‌ನ ನವಶಿಲಾಯುಗದ ಕುಲದ ವಂಶವಾಹಿಯು ಭಾರತೀಯ ಇತರ ಜನಾಂಗಗಳಲ್ಲಿ ಕಂಡು ಬರುವುದಕ್ಕಿಂತ ಪೂರ್ಣ ವಿಭಿನ್ನವಾಗಿದ್ದು, ಅದು ಪ್ರಾಚೀನ ಮೂಲದಿಂದ ಬಂದಿದ್ದಾಗಿದೆ. ಅಂದರೆ, ಕೊರಗರು ಭಾರತದ ಜನಾಂಗೀಯ ಇತಿಹಾಸದ ಹಳೆಯ ಕೊಂಡಿ ಎಂಬುದನ್ನು ಈ ಸಂಶೋಧನೆ ತೆರೆದಿಟ್ಟಿದೆ. ಅಲ್ಲದೆ, ಕೊರಗರ ಅಸ್ತಿತ್ವವಿಲ್ಲದೆ, ಭಾರತೀಯ ಆನುವಂಶೀಯತೆಯ ಪರಿಕಲ್ಪನೆ ಅಪೂರ್ಣವಾಗುತ್ತದೆ. ಹೀಗಾಗಿ, ಕೊರಗರು ಪ್ರಾಚೀನ ಪ್ರೊಟೊ ದ್ರಾವಿಡ ಪೂರ್ವಜರ ಇಂದಿನ ಪ್ರತಿನಿಧಿಗಳು ಎಂದು ಅಧ್ಯಯನವು ಬಲವಾಗಿ ಪ್ರತಿಪಾದಿಸಿದೆ.

'ಇರಾನ್‌ನ ನವಶಿಲಾಯುಗದ ಕಾಲದ ಪೂರ್ವಜರು ಹಾಗೂ ಕೊರಗರ ಪೂರ್ವಜರು ಒಂದೇ ವಂಶಸ್ಥರಾಗಿರುವ, ಅವರೂ ಬೇಟೆಗಾರ ಕಸುಬಿನವರೇ ಆಗಿರುವ ಸಾಧ್ಯತೆಗಳು ಬಲವಾಗಿವೆ. ಕಾಲಕ್ರಮೇಣ ಆ ವಂಶವು ಕವಲಾಗಿ ಒಡೆದು, ಕೆಲವರು ಕೃಷಿಯೆಡೆಗೆ ವಾಲಿರಬಹುದು, ಕೆಲವರು ಮೂಲ ಕಸುಬನ್ನೇ ನೆಚ್ಚಿಕೊಂಡಿರಬಹುದು. ಇದಕ್ಕೆ ಸಾಕ್ಷಿಯೆಂಬಂತೆ ಕೊರಗರಲ್ಲಿ ಬಹುತೇಕರಿಗೆ ಇಂದಿಗೂ ಕಿರು ಅರಣ್ಯ ಉತ್ಪನ್ನ ಸಂಗ್ರಹ, ಬುಟ್ಟಿ ಹೆಣಿಗೆಯೇ ಜೀವನೋಪಾಯವಾಗಿದೆ' ಎಂದು ವಿವರಿಸುತ್ತಾರೆ ಜೈಸನ್ ಸಿಕ್ವೇರಾ.

ಈ ಸಂಶೋಧನೆಯು ಭಾರತದ ಪುರಾತನ ಜನಾಂಗೀಯ ಇತಿಹಾಸದ ಮೇಲೆ ಹೊಸ ನೋಟ ಬೀರಿದೆ. ಕೊರಗರು ಹಾಗೂ ಇರಾನ್‌ನ ಸುಮಾರು 10 ಸಾವಿರ ವರ್ಷಗಳ ಹಿಂದಿನ ಸಮುದಾಯದ ಜನರೊಂದಿಗೆ ಆನುವಂಶಿಕ ಸಂಬಂಧ ಇರುವುದರಿಂದ 'ಎಲಾಮೋ- ದ್ರಾವಿಡ ಸಿದ್ಧಾಂತಕ್ಕೆ' ಬೆಂಬಲ ಸಿಕ್ಕಂತಾಗಿದೆ. ಈ ಸಿದ್ಧಾಂತದ ಪ್ರಕಾರ ಇರಾನ್‌ನ ಎಲಾಮೈಟ್ ಭಾಷೆ ಮತ್ತು ಭಾರತದ ದ್ರಾವಿಡ ಭಾಷೆಗಳು ಒಂದೇ ಮೂಲದಿಂದ ಬಂದಿವೆ. ಕೊರಗರು ಸಮಾಜದ ಅಂಚಿನಲ್ಲಿರುವವರಲ್ಲ, ಬದಲಾಗಿ ಭಾರತದ ಮೂಲ ಕಥೆಯ ಮುಖ್ಯ ಪಾತ್ರಧಾರಿಗಳು ಎಂಬುದು ಅವರು ಮಂಡಿಸುವ ವಾದ.


ಬುಟ್ಟಿ ಹೆಣೆಯಲು ಬಿಳಲು ಸ್ವಚ್ಛ ಮಾಡುತ್ತಿದ್ದ ಕೊರಗ ಮಹಿಳೆಯರು ಪ್ರಜಾವಾಣಿ ಚಿತ್ರ :ಫಕ್ರುದ್ದೀನ್ ಎಚ್.



### ಮನೋವೈಜ್ಞಾನಿಕ ಅಧ್ಯಯನ ಅಗತ್ಯ

'ನೈಜ ದುರ್ಬಲ ಬುಡಕಟ್ಟು ಸಮುದಾಯಕ್ಕೆ ಸೇರಿರುವ ಕೊರಗರು ಸಂಖ್ಯೆಯಲ್ಲಿ ಕ್ಷೀಣವಾದ ಸಮುದಾಯ. 40 ವರ್ಷಗಳ ಸಂಘಟಿತ ಶ್ರಮದಿಂದ ಕೆಲವರು ಶಿಕ್ಷಣ ಪಡೆದವರು ಇದ್ದರೂ, ಔದ್ಯೋಗಿಕ ಭದ್ರತೆ ಇಲ್ಲದೆ ಆತಂಕದಲ್ಲಿ ಪರಿತಪಿಸುವಂತಾಗಿದೆ. ಕಾಲದ ಸಮಸ್ಯೆಗಳಿಗೆ ಉತ್ತರ ಹುಡುಕುತ್ತ ಹೋರಾಟದಲ್ಲೇ ಜೀವನ ನಡೆಸುತ್ತಿದ್ದಾರೆ. ಈ ಕಾರಣಕ್ಕೆ ಕೊರಗ ಸಮುದಾಯಕ್ಕೆ ನೇರ ನೇಮಕಾತಿಯೊಂದಿಗೆ ಉದ್ಯೋಗ ಭದ್ರತೆ ಒದಗಿಸಬೇಕು, ಕೊರಗರ ಬಗ್ಗೆ ಸಾಮಾಜಿಕ, ಮನೋವೈಜ್ಞಾನಿಕ, ಜೈವಿಕ ಅಧ್ಯಯನಗಳು ಸ್ಥಳೀಯ ಸರ್ಕಾರಿ ವಿಶ್ವವಿದ್ಯಾಲಯಗಳಿಂದ ನಡೆಯಬೇಕು' ಎನ್ನುತ್ತಾರೆ ಮಂಗಳೂರು ವಿವಿಯ ಪ್ರಾಧ್ಯಾಪಕಿ ಸಬಿತಾ ಕೊರಗ.


ಸಬಿತಾ

Publication Date
20/02/2026

## ❖ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆ

**ಸಂದರ್ಭ: ದೇಶದಲ್ಲಿ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

- ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆಯು 11 ಹಾಗೂ ಡಿಸೆಂಬರ್‌ನಲ್ಲಿ 8 ಇತ್ತು. ಇದೀಗ ಅದು 7ಕ್ಕೆ ಇಳಿದಿದೆ.
- ಇವುಗಳನ್ನು 'ಹೆಚ್ಚು ಬಾಧಿತ, ಕಳವಳಕಾರಿ ಹಾಗೂ ಇತರ ಎಡಪಂಥೀಯ ಉಗ್ರವಾದದಿಂದ ತೊಂದರೆಗೀಡಾಗಿರುವ ಜಿಲ್ಲೆ'ಗಳೆಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

- ಛತ್ತೀಸಗಢದ ಬಿಜಾಪುರ, ನಾರಾಯಣಪುರ, ಸುಕ್ಮಾ, ಕಾಂಕೇರ್ ಹಾಗೂ ದಂತೇವಾಡ, ಜಾರ್ಖಂಡ್ ಪಶ್ಚಿಮ ಸಿಂಗಭೂಮ್ ಮತ್ತು ಒಡಿಶಾದ ಕಂಧಮಾಲ್ ಜಿಲ್ಲೆಗಳನ್ನು ಸದ್ಯ ನಕ್ಸಲ್ ಪೀಡಿತ ಜಿಲ್ಲೆಗಳೆಂದು ಗುರುತಿಸಲಾಗಿದೆ. ಕಾಂಕೇರ್ ಹಾಗೂ ಪಶ್ಚಿಮ ಸಿಂಗಭೂಮ್ ಜಿಲ್ಲೆಗಳು ಆತಂಕಕಾರಿ ವಾತಾವರಣ ಇರುವ ಪ್ರದೇಶಗಳೆನಿಸಿದ್ದು, ಇಲ್ಲಿ ನಕ್ಸಲ್ ಚಟುವಟಿಕೆ ಕ್ಷೀಣಿಸುತ್ತಿದೆ. ಆದರೆ, ನಕ್ಸಲ್ ವಿರೋಧಿ ಕಾರ್ಯಾಚರಣೆಯ ಅಗತ್ಯವಿದೆ ಎಂದು ತಿಳಿಸಿದ್ದಾರೆ.
- ದಂತೇವಾಡ ಹಾಗೂ ಕಂಧಮಾಲ್ ಇತರ ಎಡಪಂಥೀಯ ಉಗ್ರವಾದದಿಂದ ತೊಂದರೆಗೀಡಾಗಿರುವ ಜಿಲೆಗಳ ವಿಭಾಗದಲ್ಲಿವೆ ಎಂದೂ ಅವರು ಹೇಳಿದ್ದಾರೆ.

## ❖ ಎ.ಐ ಜಾತ್ರೆಯಲ್ಲಿ “ಜಿ.ಐ' ಕಾಫಿಯ ಪರಿಮಳ

**ಸಂದರ್ಭ: ನವದೆಹಲಿಯಲ್ಲಿ ನಡೆಯುತ್ತಿರುವ 'ಎ.ಐ ಇಂಪ್ಯಾಕ್ಟ್ ಶೃಂಗ'ದಲ್ಲಿ ಭಾರತೀಯ ಕಾಫಿ ಮಂಡಳಿ ತೆರೆದಿರುವ ಮಳಿಗೆಯು ಗಣ್ಯರ ಗಮನಸೆಳೆದಿದೆ.**

- ಗೂಗಲ್ ಕಂಪನಿಯ ಸಿಇಒ ಸುಂದರ್ ಪಿಚೈ ಈ ಮಳಿಗೆಗೆ ಭೇಟಿ ನೀಡಿ ಕಾಫಿ ಸವಿದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
- ಕರ್ನಾಟಕ ಜಿ.ಐ ಟ್ಯಾಗ್ ಹೊಂದಿರುವ ಕಾಫಿಯನ್ನು ಪಿಚೈ ಅವರು ಕುತೂಹಲದಿಂದ ವೀಕ್ಷಿಸಿ ಕಾಫಿ ಸವಿಯುವ ವಿಡಿಯೊವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಇದು ಕಾಫಿ ಬೆಳೆಗಾರರಲ್ಲಿ ಕೆಲವು ನಿರೀಕ್ಷೆಗಳನ್ನು ಮೂಡಿಸಿದೆ.
- 'ಭಾರತೀಯ ಕಾಫಿಯು ಜಾಗತಿಕವಾಗಿ ಬ್ರ್ಯಾಂಡ್ ಆಗಲು ಇದು ಮೊದಲ ಹೆಜ್ಜೆ, ಈ ಅವಕಾಶವನ್ನು ಕಾಫಿ ಮಂಡಳಿ ಮಾತ್ರವಲ್ಲ, ಕೇಂದ್ರ ವಾಣಿಜ್ಯ ಸಚಿವಾಲಯ ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂಬ ಒತ್ತಾಯ ಕೇಳಿ ಬಂದಿದೆ.
- ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್, 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿ, 'ಸುಂದರ್ ಪಿಚೈ ಮಾತ್ರವಲ್ಲ, ಸಾಕಷ್ಟು ಜಾಗತಿಕ ಉದ್ಯಮಿಗಳು ಮಳಿಗೆಗೆ ಭೇಟಿ ನೀಡಿ ಪ್ರದರ್ಶನಕ್ಕಿಟ್ಟಿದ್ದ ಭಾರತೀಯ ಜಿಐ ಟ್ಯಾಗ್ ಕಾಫಿಯ ಕುರಿತು ಮಾಹಿತಿ ಪಡೆದರು. ಇದು ಭಾರತೀಯ ಕಾಫಿ ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡ್ ಆಗುವ ನಿಟ್ಟಿನಲ್ಲಿ ಸಹಕಾರಿ' ಎಂದರು.
- 'ಈ ಮಳಿಗೆಯಲ್ಲಿ ಕರ್ನಾಟಕದಿಂದ ಜಿ.ಐ ಟ್ಯಾಗ್ ಪಡೆದಿರುವಂತಹ ಚಿಕ್ಕಮಗಳೂರು, ಬಾಬಾಬುಡನ್, ಮಂಜರಾಬಾದ್, ಕೂರ್ಗ್ ಅರೆಬಿಕಾ ಹಾಗೂ ಮಾನ್ಸೂನ್ ಮಲಬಾರ್ ಕಾಫಿ ಸಹ ಇತ್ತು. ಇವುಗಳೂ ಜಾಗತಿಕ ನಾಯಕರ ಗಮನ ಸೆಳೆದವು' ಎಂದು ಕಾಫಿ ಮಂಡಳಿ ಉಪನಿರ್ದೇಶಕ ಚಂದ್ರಶೇಖರ್ ಹೇಳಿದರು.
- ಈ ಕುರಿತು ಪ್ರತಿಕ್ರಿಯಿಸಿದ ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ನಂದಾ ಬೆಳ್ಳಿಯಪ್ಪ, 'ಜಾಗತಿಕವಾಗಿ ಭಾರತೀಯ ಕಾಫಿಯನ್ನು ಹೆಚ್ಚು ಪ್ರಚಾರ ಮಾಡಲು ಇದೊಂದು ಸುವರ್ಣ ಅವಕಾಶ' ಎಂದರು.

## ❖ “ಗಾಜಾ ಪರಿಹಾರ: 7 ಬಿಲಿಯನ್ ಡಾಲರ್ ನೆರವು'

**ಸಂದರ್ಭ: ಯುದ್ಧಪೀಡಿತ ಗಾಜಾದಲ್ಲಿನ ಪರಿಹಾರ ಕಾರ್ಯಾಚರಣೆಗಳಿಗಾಗಿ ಶಾಂತಿ ಮಂಡಳಿಯ ಒಂಬತ್ತು ಸದಸ್ಯ ರಾಷ್ಟ್ರಗಳು 7 ಬಿಲಿಯನ್ ಡಾಲರ್ (₹63 ಸಾವಿರ ಕೋಟಿ) ನೀಡಲು ಒಪ್ಪಿಕೊಂಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.**

- ಗಾಜಾ ಪುನರ್ ನಿರ್ಮಾಣಕ್ಕಾಗಿ ರಚಿಸಿರುವ ಶಾಂತಿ ಮಂಡಳಿಯ ಉದ್ಘಾಟನಾ ಸಭೆಯಲ್ಲಿ ಟ್ರಂಪ್ ಅವರು ಈ ಘೋಷಣೆ ಮಾಡಿದ್ದಾರೆ.

Dr. Rajkumar IAS/KAS Academy

- 'ಕಜಕಸ್ತಾನ, ಅಜರ್‌ಬೈಜಾನ್, ಯುಎಇ. ಮೊರಾಕೊ, ಬಹರೇನ್, ಕತಾರ್, ಸೌದಿ ಅರೇಬಿಯಾ, ಉಜ್ಬಕಿಸ್ತಾನ ಹಾಗೂ ಕುವೈತ್ ರಾಷ್ಟ್ರಗಳು ಈ ಅನುದಾನ ನೀಡಲು ಒಪ್ಪಿಕೊಂಡಿವೆ.
- ಪ್ರತಿಯೊಂದು ಡಾಲರ್ ಕೂಡ ಸ್ಥಿರತೆ ಹಾಗೂ ಹೊಸ ಪ್ರಾಂತ್ಯದ ಸ್ಥಾಪನೆಯ ಭರವಸೆಯ ಮೇಲೆ ಮಾಡುತ್ತಿರುವ ಹೂಡಿಕೆಯಾಗಿದ್ದು, ದಾನಿಗಳಿಗೆ ಧನ್ಯವಾದ ತಿಳಿಸುತ್ತೇನೆ' ಎಂದೂ ಟ್ರಂಪ್ ಹೇಳಿದ್ದಾರೆ.
- ಅಮೆರಿಕ ಕೂಡ ಮಂಡಳಿಗೆ 10 ಬಿಲಿಯನ್ ಡಾಲರ್ (₹91 ಸಾವಿರ ಕೋಟಿ) ನೀಡುವ ಬದ್ಧತೆ ಘೋಷಿಸಿದೆ ಎಂದೂ ಟ್ರಂಪ್ ಹೇಳಿದ್ದಾರೆ. ಆದರೆ, ಯಾವ ಉದ್ದೇಶಕ್ಕೆ ಆ ಹಣವನ್ನು ಬಳಕೆ ಮಾಡಲಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟನೆ ನೀಡಿಲ್ಲ.




## ❖ ತಾಯಂದಿರ ಮರಣ ತಗ್ಗಿಸಲು ಸಮಿತಿ

**ಸಂದರ್ಭ: ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆರೋಗ್ಯ ಇಲಾಖೆಯು ಉನ್ನತ ಮಟ್ಟದ ಸಮಿತಿ ರಚಿಸಿ ಆದೇಶ ಹೊರಡಿಸಿದೆ.**

- ಈ ಅಭಿಯಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಮತ್ತು ನಿಯಮಗಳನ್ನು ಅನುಸರಿಸಿ ಅನುಷ್ಠಾನಗೊಳಿಸಲು, ₹139.53 ಕೋಟಿಯ ಸಮಗ್ರ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನು ಮೋದನೆ ನೀಡಲಾಗಿದೆ. ಈ ಸಂಬಂಧ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಹತ್ತು ಮಂದಿಯನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.
- ರಾಜ್ಯದಲ್ಲಿ ತಾಯಂದಿರ ಮರಣಕ್ಕೆ ಕಾರಣಗಳನ್ನು ಪರಿ ಶೀಲಿಸಿ, ತಡೆಗಟ್ಟುವ ಕ್ರಮಗಳನ್ನು ಸಮಿತಿ ಕೈಗೊಳ್ಳಲಿದೆ. ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು, ಎಲ್ಲ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಆರೋಗ್ಯ ಸೇವೆಗಳ ಸಾರ್ವತ್ರಿಕ ಲಭ್ಯತೆ ಯನ್ನು ಖಚಿತಪಡಿಸಿಕೊಳ್ಳು ವುದು.
- ವೈದ್ಯಕೀಯ ಸಂಸ್ಥೆಗಳಲ್ಲಿ ತಾಯಂದಿರ ಆರೋಗ್ಯ ಆರೈಕೆಯ ಅಸಮಾನತೆಗಳನ್ನು ಪರಿಹರಿಸುವುದು, ತೃತೀಯ ಹಂತದ ಆರೋಗ್ಯ ಸೇವೆಗಳನ್ನು ಬಲಪಡಿಸುವುದು ಸೇರಿ ವಿವಿಧ ಕಾರ್ಯಗಳನ್ನು ಕೈಗೊಳ್ಳುವಂತೆ ಸಮಿತಿಗೆ ಸೂಚಿಸಲಾಗಿದೆ.

## ❖ ರಫ್ತು ಉತ್ತೇಜನಕ್ಕೆ ಕ್ರಮ

**ಸಂದರ್ಭ: ದೇಶದ ರಫ್ತು ವಹಿವಾಟು ಜಾಸ್ತಿ ಮಾಡಲು ಇ-ವಾಣಿಜ್ಯ ಕ್ಷೇತ್ರದ ರಫ್ತುದಾರರಿಗೆ ಸಾಲದ ನೆರವು ಸೇರಿದಂತೆ ಹಲವು ಕ್ರಮಗಳನ್ನು ಕೇಂದ್ರ ಸರ್ಕಾರವು ಪ್ರಕಟಿಸಿದೆ.**

- ರಫ್ತು ಉತ್ತೇಜನಕ್ಕೆ ರೂಪಿಸಿರುವ ₹25,060 ಕೋಟಿ ಮೊತ್ತದ ಯೋಜನೆ ಭಾಗವಾಗಿ ಈ ಕ್ರಮಗಳನ್ನು ಪ್ರಕಟಿಸ ಲಾಗಿದೆ. ಯೋಜನೆಯು 10 ಅಂಶಗಳನ್ನು ಹೊಂದಿದ್ದು, ಆ ಪೈಕಿ ಮೂರನ್ನು ಜನವರಿಯಲ್ಲಿ ಜಾರಿಗೆ ತರಲಾಗಿದೆ.
- ಡಿಜಿಟಲ್ ವೇದಿಕೆಗಳನ್ನು ಬಳಸಿ ಕೊಂಡು ಸರಕುಗಳನ್ನು ರಫ್ತು ಮಾಡು ವವರಿಗೆ ನೆರವು ನೀಡುವ ಉದ್ದೇಶದಿಂದ ಕೇಂದ್ರ ವಾಣಿಜ್ಯ ಸಚಿವಾಲಯವು ಬಡ್ಡಿ ರಿಯಾಯಿತಿಯ ಸಾಲ ಸೌಲಭ್ಯವನ್ನು ಪ್ರಕಟಿಸಿದೆ. ಅಲ್ಲದೆ, ಇದರ ಜೊತೆಯಲ್ಲೇ ಒಂದಿಷ್ಟು ಪ್ರಮಾಣದ ಸಾಲಕ್ಕೆ ಸರ್ಕಾರದ ಖಾತರಿ ಸಹ ಸಿಗಲಿದೆ. ಇ-ವಾಣಿಜ್ಯ ಸಾಲ ಸೌಲಭ್ಯದ ಅಡಿಯಲ್ಲಿ ₹50 ಲಕ್ಷದವರೆಗೆ ನೆರವು, ಸಾಲದ ಶೇ 90ರಷ್ಟು ಮೊತ್ತದ ವರೆಗೆ ಖಾತರಿಯ ಸೌಲಭ್ಯ ಇರಲಿದೆ.
- ವಿದೇಶಿ ಮಾರುಕಟ್ಟೆಗಳಲ್ಲಿ ಸರಕುಗಳ ದಾಸ್ತಾನು ಇರಿಸಿಕೊಳ್ಳುವವರಿಗೆ ನೆರವು ನೀಡುವ ಉದ್ದೇಶದಿಂದ ₹5 ಕೋಟಿ ವರೆಗೆ ಸಾಲ, ಸಾಲದ ಶೇ 75ರಷ್ಟು ಮೊತ್ತದವರೆಗೆ ಖಾತರಿ, ಶೇ 2.75ರಷ್ಟು ಬಡ್ಡಿ ರಿಯಾಯಿತಿ ಸಿಗಲಿದೆ. ಆದರೆ ಬಡ್ಡಿ ರಿಯಾಯಿತಿಯು ವಾರ್ಷಿಕ ₹15 ಲಕ್ಷದ ಮಿತಿಯನ್ನು ಒಳಗೊಂಡಿರುತ್ತದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

## ❖ ಜಿಡಿಪಿ ಹೆಚ್ಚಳಕ್ಕೆ ಎ.ಐ ಸಹಕಾರಿ

**ಸಂದರ್ಭ: ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮುಖ್ಯಸ್ಥೆ ಜಾರ್ಜಿವಾ ಅಭಿಪ್ರಾಯ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಜಾಗತಿಕವಾಗಿ ಜಿಡಿಪಿ ಬೆಳವಣಿಗೆ ಯನ್ನು ಶೇಕಡ 0.8ರಷ್ಟು ಹೆಚ್ಚಿಸಬಹುದು ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜಿವಾ ಅಂದಾಜು ಮಾಡಿದ್ದಾರೆ.**

Dr. Rajkumar IAS/KAS Academy

- 'ಅಲ್ಲದೆ, ಎ.ಐ ತಂತ್ರಜ್ಞಾನವು ವಿಕಸಿತ ಭಾರತ ಮತ್ತು ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿ ಸಾಧನೆಗೆ ನೆರವಾಗಲಿದೆ' ಎಂದಿದ್ದಾರೆ.
- 'ಎ.ಐ ತಂತ್ರಜ್ಞಾನವು ಜಗತ್ತಿನ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲಿದೆ. ಅಂದರೆ ಕೋವಿಡ್ ಸಾಂಕ್ರಾಮಿಕ, ಕ್ಕಿಂತ ಮೊದಲಿನ ಅವಧಿಯಲ್ಲಿ ಜಗತ್ತು ಎಷ್ಟು ವೇಗವಾಗಿ ಆರ್ಥಿಕ ಬೆಳವಣಿಗೆ ಕಾಣುತ್ತಿತ್ತೋ ಅದಕ್ಕಿಂತ ಹೆಚ್ಚಿನ ವೇಗದ ಬೆಳವಣಿಗೆ ಸಾಧ್ಯವಾಗಲಿದೆ. ಅದು ಹೊಸ ಅವಕಾಶಗಳನ್ನು, ಹೊಸ ಉದ್ಯೋಗ ಗಳನ್ನು ಸೃಷ್ಟಿಸುವುದಕ್ಕೆ ಬಹಳ ಉತ್ತಮ' ಎಂದು ಇಲ್ಲಿ ನಡೆಯುತ್ತಿರುವ 'ಎ.ಐ ಇಂಪ್ಯಾಕ್ಸ್ ಶೃಂಗಸಭೆ'ಯಲ್ಲಿ ಅವರು ಹೇಳಿದ್ದಾರೆ.



## ಎ.ಐ ಅಪಾಯಗಳ ಬಗ್ಗೆ ಎಚ್ಚರಿಕೆ

ಎ.ಐ ತಂತ್ರಜ್ಞಾನದ ಪರಿಣಾಮವಾಗಿ ಮೂರು ಪ್ರಮುಖ ಅಪಾಯಗಳು ಎದುರಾಗಬಹುದು ಎಂದು ಕ್ರಿಸ್ಟಲೀನಾ ಜಾರ್ಜಿವಾ ಎಚ್ಚರಿಸಿದರು.

ಮೊದಲನೆಯದಾಗಿ, 'ಜಗತ್ತಿನಲ್ಲಿ ಕೆಲವು ದೇಶಗಳು ಎ.ಐ ತಂತ್ರಜ್ಞಾನ ಹೊಂದಲಿವೆ, ಇತರ ಹಲವು ದೇಶಗಳ ಬಳಿ ಈ ತಂತ್ರಜ್ಞಾನ ಇರುವುದಿಲ್ಲ. ಇದರಿಂದಾಗಿ ಜಗತ್ತು ಹೆಚ್ಚು ಅಸಮಾನವಾಗುವ ಅಪಾಯವಿದೆ' ಎಂದಿದ್ದಾರೆ.

ಎರಡನೆಯದಾಗಿ, ಎ.ಐ ತಂತ್ರಜ್ಞಾನವು ಹಣಕಾಸು ಮಾರುಕಟ್ಟೆಗಳಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸಬಹುದು ಎಂದು ಎಚ್ಚರಿಸಿದ್ದಾರೆ.

ಎ.ಐ ಕಾರಣದಿಂದಾಗಿ ಉದ್ಯೋಗಗಳಲ್ಲಿ ಬದಲಾವಣೆ ಆಗಬಹುದು. ಆದರೆ, ಎ.ಐ ಆಧಾರಿತ ಅರ್ಥವ್ಯವಸ್ಥೆಯಲ್ಲಿ ಕೆಲಸ ಕಂಡುಕೊಳ್ಳುವುದು ಹೇಗೆ ಎಂಬ ಬಗ್ಗೆ ಜನರಿಗೆ ನೆರವು ನೀಡುವ ವಿಚಾರವಾಗಿ ಹೆಚ್ಚು ಆಲೋಚನೆ ನಡೆಯುತ್ತಿಲ್ಲ ಎಂದಿದ್ದಾರೆ.

'ಎ.ಐ ಜಾಗತಿಕವಾಗಿ ಶೇ 40ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರುವ ಅಂದಾಜಿದೆ ಎಂದು ಕ್ರಿಸ್ಟಲಿನಾ ಜಾರ್ಜಿವಾ ಎಚ್ಚರಿಸಿದ್ದಾರೆ.

'ನಮ್ಮ ಅಂದಾಜಿನ ಪ್ರಕಾರ ಉದ್ಯೋಗ ಮಾರುಕಟ್ಟೆಯ ಮೇಲೆ ಎ.ಐ ಪರಿಣಾಮ ತುಂಬಾ ಹೆಚ್ಚಿರಲಿದೆ, ಸುನಾಮಿಯಂತಹ ಪರಿಣಾಮ ಬೀರಲಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಎ.ಐ ಶೇ 40ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರಿದರೆ, ಮುಂದುವರಿದ ದೇಶಗಳಲ್ಲಿ ಶೇ 60ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರುವ ಅಂದಾಜಿದೆ' ಎಂದು ಹೇಳಿದ್ದಾರೆ.

- 2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವ ಮತ್ತು 30 ಟ್ರಿಲಿಯನ್ ಡಾಲರ್ ಗಾತ್ರದ ಆರ್ಥಿಕತೆಯನ್ನು ಹೊಂದುವ ಮಹತ್ವಾ ಕಾಂಕ್ಷೆಯನ್ನು ಇರಿಸಿಕೊಂಡಿದೆ.
- ಕಣ್ಮರೆ ಆಗಲಿರುವ ಉದ್ಯೋಗಗಳು ಆರಂಭಿಕ ಹಂತದವು ಎಂಬುದು ಕಳವಳ ಮೂಡಿಸುವಂಥದ್ದು.ಈ ಬಗೆಯ ಉದ್ಯೋಗಗಳನ್ನು ಬಯಸುವವರಿಗೆ ಅಪಾಯ ಇದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಎ.ಐ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನಿರ್ವಹಿಸಬೇಕು ಎಂದಾದರೆ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕು. ಜನರು ಹೊಸದನ್ನು ಕಲಿಯುವುದನ್ನು ಕಲಿತುಕೊಳ್ಳಬೇಕು ಎಂದು ಹೇಳಿದ್ದಾರೆ.

## ❖ 'ಭಾರತ–ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದ ಏಪ್ರಿಲ್‌ನಲ್ಲಿ ಜಾರಿ'

**ಸಂದರ್ಭ: ಭಾರತ- ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಮಾರ್ಚ್‌ನಲ್ಲಿ ಸಹಿ ಬೀಳುವ ನಿರೀಕ್ಷೆ ಇದೆ. ಒಪ್ಪಂದವು ಏಪ್ರಿಲ್‌ನಲ್ಲಿ ಜಾರಿಗೆ ಬರಲಿದೆ ಎಂದು ಕೇಂದ್ರವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.**

- ಫೆಬ್ರುವರಿ 23ರಿಂದ ವಾಷಿಂಗ್ಟನ್ ನಲ್ಲಿ ಮೂರು ದಿನ ನಡೆಯಲಿರುವ ಸಭೆಯಲ್ಲಿ ಭಾರತ ಮತ್ತು ಅಮೆರಿಕದ ಅಧಿಕಾರಿಗಳು ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲಿದ್ದಾರೆ ಎಂದು ಎ.ಐ ಇಂಪ್ಯಾಕ್ಸ್ ಶೃಂಗ ಸಭೆಯಲ್ಲಿ ಹೇಳಿದ್ದಾರೆ.
- ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್‌ಆರ್) ಜೇಮ್ಸ್‌ಸನ್ ಗ್ರೀರ್ ಭಾರತಕ್ಕೆ ಮಾರ್ಚ್‌ನಲ್ಲಿ ಭೇಟಿ ನೀಡಿ. ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆ ಇದೆ.
- ಬ್ರಿಟನ್ ಮತ್ತು ಒಮಾನ್ ಜೊತೆ ಭಾರತ ಮಾಡಿ ಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದವು ಏಪ್ರಿಲ್‌ನಲ್ಲಿ ಅನುಷ್ಠಾನಗೊಳ್ಳುವ ನಿರೀಕ್ಷೆ ಇದೆ. ನ್ಯೂಜಿಲೆಂಡ್ ಜೊತೆಗಿನ ಒಪ್ಪಂದವು ಸೆಪ್ಟೆಂಬರ್‌ನಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

## ❖ ಪ್ಯಾಕ್ಸ್ ಸಿಲಿಕಾ ಒಕ್ಕೂಟಕ್ಕೆ ಭಾರತ ಸೇರ್ಪಡೆ

**ಸಂದರ್ಭ: ವಿರಳ ಖನಿಜಗಳು ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ಕ್ಷೇತ್ರಗಳಲ್ಲಿ ಪೂರೈಕೆ ಸರಪಳಿ ಸೃಷ್ಟಿಸುವ ಉದ್ದೇಶದಿಂದ ಅಮೆರಿಕ ನೇತೃತ್ವದ 'ಪ್ಯಾಕ್ಸ್ ಸಿಲಿಕಾ' ಒಕ್ಕೂಟಕ್ಕೆ ಭಾರತ ಶುಕ್ರವಾರ ಸೇರ್ಪಡೆಯಾಗಿದೆ.**

- 'ಭಾರತ ಅಮೆರಿಕ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ ಅಡಿಯಲ್ಲಿ 'ಪ್ಯಾಕ್ ಸಿಲಿಕಾ'ದೊಂದಿಗಿನ ಸಹಕಾರವು ತಂತ್ರಜ್ಞಾನ ಮತ್ತು ಪೂರೈಕೆ ಸರಪಳಿ ಯನ್ನು ಮತ್ತಷ್ಟು ಬಲಗೊಳಿಸುತ್ತದೆ.

- ಇದು ಭಾರತದ ಎಲೆಕ್ಟ್ರಾನಿಕ್ಸ್ ಮತ್ತು ವೈಷ್ಣವ್ ಸೆಮಿಕಂಡಕ್ಟರ್ ಉದ್ಯಮಕ್ಕೆ ಹೆಚ್ಚಿನ ಪ್ರಯೋಜನ ನೀಡುತ್ತದೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

## ❖ ದೇಶದ ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

**ಸಂದರ್ಭ: ದೇಶದ ಎಂಟು ಪ್ರಮುಖ ಮೂಲ ಸೌಕರ್ಯ ವಲಯಗಳ ಉತ್ಪಾದನೆ ಜನವರಿಯಲ್ಲಿ ಶೇ 4ಕ್ಕೆ ಇಳಿದಿದೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.**

- ಇದು ಎರಡು ತಿಂಗಳ ಕನಿಷ್ಠಮಟ್ಟ, ಕಳೆದ ವರ್ಷದ ಜನವರಿಯಲ್ಲಿ ಮೂಲಸೌಕರ್ಯ ವಲಯಗಳ ಉತ್ಪಾದನೆ ಶೇ 5.1 ಮತ್ತು ಡಿಸೆಂಬರ್‌ನಲ್ಲಿ ಶೇ 4.7ರಷ್ಟು ದಾಖಲಾಗಿತ್ತು. ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆ ಜನವರಿಯಲ್ಲಿ ಇಳಿಕೆ ಆಗಿದೆ.
- ಕಲ್ಲಿದ್ದಲು, ಸಿಮೆಂಟ್ ಉತ್ಪಾದನೆಯು ಕ್ರಮವಾಗಿ ಶೇ 3.1 ಮತ್ತು ಶೇ 10.7ರಷ್ಟು ದಾಖಲಾಗಿದೆ. ಕಳೆದ ವರ್ಷದ ಜನವರಿಯಲ್ಲಿ ಇದು ಶೇ 4.6 ಮತ್ತು ಶೇ 14.3ರಷ್ಟಿತ್ತು. ರಸಗೊಬ್ಬರ, ಉಕ್ಕು ಮತ್ತು ವಿದ್ಯುತ್ ಉತ್ಪಾದನೆಯು ಸಕಾರಾತ್ಮಕ ಬೆಳವಣಿಗೆ ಕಂಡಿದೆ ಎಂದು ತಿಳಿಸಿದೆ.
- ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ ಜನವರಿವರೆಗೆ ಈ ವಲಯಗಳ ಉತ್ಪಾದನೆ ಶೇ 2.8ರಷ್ಟು ದಾಖಲಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಇದು ಶೇ4.5ರಷ್ಟಿತ್ತು ಎಂದು ತಿಳಿಸಿದೆ.

------------------------------------------ಶುಭವಂದನೆಗಳು------------------------------------------

